# ಕನ್ನಡ ಪೋಸ್ಟ್

ಇದು ಸುದ್ದಿ ವಿಳಾಸ

ಸಂಪಾದಕ : ಮಂಜು ಬನವಾಸೆ

KANNADA POST

ಕನ್ನಡ ದಿನ ಪತ್ರಿಕೆ Kannada Daily

ಹಾಸನ E-mail : kannadapostnews@gmail.com / ಕನ್ನಡ post Price: ₹1

Vol.No.01 | Issue. 197 | Pages. 2 | Date: 14-06-2025, SATURDAY RNI NO: KARKAN/2024/89601

ಸಂಪುಟ : 01 - ಸಂಚಿಕೆ : 197 - ಪುಟಗಳು : 2 - 14 ಜೂನ್ 2025 ಶನಿವಾರ Ph: 8762954248 ದರ : ₹1


# ಬೆಳೆ ವಿಮೆ: ಜಾಗೃತಿಗೆ ಜಿಲ್ಲಾಧಿಕಾರಿ ಸೂಚನೆ

## ಓರಿಯಂಟಲ್ ಇನ್‌ಶೂರೆನ್ಸ್ ಕಂಪನಿಯೊಂದಿಗೆ ಒಡಂಬಡಿಕೆ | ಸಮೀಕ್ಷೆಗೆ ತಂತ್ರಜ್ಞಾನ ನೆರವು

ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್

ಹಾಸನ: ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯಡಿ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಲು ರೈತರಿಗೆ ಅರಿವು ಮೂಡಿಸಬೇಕು ಎಂದು ಜಿಲ್ಲಾಧಿಕಾರಿ ಸಿ. ಸತ್ಯಭಾಮ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಫಸಲ್ ಬಿಮಾ ಯೋಜನೆಯ ಜಿಲ್ಲಾ ಮಟ್ಟದ ಉಸ್ತುವಾರಿ ಸಭೆಯಲ್ಲಿ ಮಾತನಾಡಿ, ಜಿಲ್ಲೆಯಲ್ಲಿ ಓರಿಯಂಟಲ್ ಇನ್ ಶೂರೆನ್ಸ್ ಕಂಪನಿ ಸಹಯೋಗದೊಂದಿಗೆ 2025-26ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಹೋಬಳಿ ಹಾಗೂ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ವಿಮಾ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಪ್ರಸ್ತುತ




ಸಾಲು ಹಾಗೂ ಹಂಗಾಮಿನಲ್ಲಿ ವಿವಿಧ ವಿಮಾ ಘಟಕಗಳಲ್ಲಿ ಅಧಿಸೂಚಿಸಲಾದ ಬೆಳೆಗಳಿಗೆ ಈ ಮುಂಗಾರು ಹಂಗಾಮಿನಲ್ಲಿ ಎಲ್ಲಾ ರೈತರು ಈ ಯೋಜನೆಯಡಿ ಭಾಗವಹಿಸಬಹುದಾಗಿದೆ ಎಂದು ತಿಳಿಸಿದರು.

ಬೆಳೆ ಸಾಲ ಪಡೆಯದ ರೈತರು ಅರ್ಜಿಯೊಂದಿಗೆ ಭೂಮಿ ಹೊಂದಿರುವುದಕ್ಕೆ ಪಹಣಿ, ಖಾತೆ, ಪುಸ್ತಕ, ಪಾಸ್ ಪುಸ್ತಕ, ಕಂದಾಯ ರಶೀದಿ, ಎಫ್.ಐ.ಡಿ ನೀಡಬೇಕು. ಬ್ಯಾಂಕ್‌ನಲ್ಲಿ ಬೆಳೆ ಸಾಲ ಮಂಜೂರಾದ ಎಲ್ಲಾ ರೈತರನ್ನು ಕಡ್ಡಾಯವಾಗಿ ಯೋಜನೆಗೆ ಒಳಪಡಿಸಬೇಕು. ಬೆಳೆ ಸಾಲ ಪಡೆದ ರೈತರು ಈ ಯೋಜನೆಯಲ್ಲಿ ಭಾಗವಹಿಸಲು ಆಸಕ್ತಿ ತೋರಿದರೆ ಬ್ಯಾಂಕ್ ವ್ಯವಸ್ಥಾಪಕರಿಗೆ ಬೆಳೆ ನೋಂದಣಿ ಅಂತಿಮ ದಿನಾಂಕಕ್ಕಿಂತ 7 ದಿನಗಳು ಮುಂಚಿತವಾಗಿ ಲಿಖಿತವಾಗಿ ಮುಚ್ಚಳಿಕೆ ಪತ್ರವನ್ನು ನೀಡಿದಲ್ಲಿ ಅಂತಹ ರೈತರನ್ನು ಬೆಳೆ ವಿಮೆ ಯೋಜನೆಯಿಂದ ಕೈಬಿಡಬಹುದಾಗಿದೆ ಎಂದರು.

ಬೆಳೆ ಸಾಲ ಪಡೆಯುವ ಮತ್ತು ಬೆಳೆ ಸಾಲ ಪಡೆಯದ ರೈತರಿಗೆ ವಿಮಾ ಮೊತ್ತವು ಬೆಳೆವಾರು ಬೆಳೆ ಸಾಲದ ಪ್ರಮಾಣದ ಆಧಾರದ ಮೇಲೆ ನಿರ್ಧರಿಸಲಾಗುವುದು. ಪ್ರಾರಂಭಿಕ ಇಳುವರಿ ಲೆಕ್ಕ ಹಾಕುವಾಗ ಹಿಂದಿನ 7 ವರ್ಷಗಳು ಅಂದರೆ 2018 ರಿಂದ 2024ರ ವರೆಗಿನ ಇಳುವರಿ ಪರಿಗಣಿಸಲಾಗುವುದು. ಇದರಲ್ಲಿ ಉತ್ತಮ 5 ವರ್ಷಗಳ ಸರಾಸರಿ ಇಳುವರಿಯನ್ನು ಪರಿಗಣಿಸಲಾಗುವುದು ಎಂದು ತಿಳಿಸಿದರು.

ವಿಮಾ ಘಟಕದಲ್ಲಿ ಶೇ.75ಕ್ಕಿಂತ ಹೆಚ್ಚಿನ ಕ್ಷೇತ್ರದಲ್ಲಿ ಬಿತ್ತನೆ ವಿಫಲಗೊಂಡಲ್ಲಿ ವಿಮಾ ಮೊತ್ತದ ಗರಿಷ್ಠ ಶೇ. 25ರಷ್ಟು ಪರಿಹಾರ ವಿಮಾ ಸಂಸ್ಥೆಯು ವಿಮೆ ಮಾಡಿಸಿದ ಎಲ್ಲಾ ರೈತರಿಗೆ ಇತ್ಯರ್ಥಪಡಿಸಿ ಮುಂದಿನ ಅವಧಿಗೆ ಅವರ ಬೆಳೆ ವಿಮೆಯನ್ನು ರದ್ದುಪಡಿಸಲಾಗುವುದು ಎಂದು ತಿಳಿಸಿದರು.

### ಬೆಳೆ ಸಮೀಕ್ಷೆ ಯೋಜನೆ

ಮೊಬೈಲ್ ತಂತ್ರಾಂಶದ ಬಳಕೆಯಿಂದ ಬೆಳೆ ಸಮೀಕ್ಷೆ ಕಾರ್ಯಕ್ಕೆ ಆಯಾ ಗ್ರಾಮದ ತಂತ್ರಾಂಶದ ಜ್ಞಾನವುಳ್ಳ ಯುವಕರು (ಪಿ.ಆರ್. ಪ್ರೈವೇಟ್ ರೆಸಿಡೆಂಟ್ಸ್) ಮತ್ತು ಸರ್ಕಾರಿ ಸಿಬ್ಬಂದಿ ಸೇವೆಯನ್ನು ಬಳಸಿಕೊಂಡು ಬೆಳೆ ಸಮೀಕ್ಷೆ ಕೈಗೊಳ್ಳುವಂತೆ ತಿಳಿಸಿದರು.

ಈ ರೀತಿ ಸಂಗ್ರಹಿಸಲಾದ ದತ್ತಾಂಶವನ್ನು ಸರ್ಕಾರದ ವಿವಿಧ ಯೋಜನೆಗಳಲ್ಲಿ ಕನಿಷ್ಠ ಬೆಂಬಲ ಬೆಲೆ, ಬೆಳೆ ಪ್ರದೇಶದ ಅಂದಾಜು, ಕೃಷಿ ಮತ್ತು ತೋಟಗಾರಿಕೆ ಯೋಜನೆಗಳ ಅಡಿಯಲ್ಲಿ ಫಲಾನುಭವಿಗಳ ಆಯ್ಕೆ, ಮುಂತಾದವುಗಳಿಗೆ ಬಳಸಿಕೊಳ್ಳಲು ಸಹಾಯವಾಗುತ್ತದೆಎಂದು ತಿಳಿಸಿದರು.

ಜಿಲ್ಲೆಯಲ್ಲಿಓರಿಯಂಟಲ್‌ಜನರಲ್ ಇನ್ಸೂ ರೆನ್ಸ್ ಕಂಪನಿ, ಬೆಂಗಳೂರು ಇವರ ಸಹಯೋಗದೊಂದಿಗೆ 2025-26ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಹೋಬಳಿ ಹಾಗೂ ಗ್ರಾಮ ಪಂಚಾಯಿತಿ ಮಟ್ಟದಲ್ಲಿಕರ್ನಾಟಕರೈತ ಸಂರಕ್ಷಾ ಪ್ರಧಾನ ಮಂತ್ರಿ ಫಸಲ್ ವಿವ 'ಾಯೋಜನೆಯನ್ನುಅನುಷ್ಠಾನಗೊಳಿಸ 'ಲು ಸರ್ಕಾರಮಂಜೂರಾತಿ ನೀಡಿದೆ.

ಬೆಳೆ ಸಾಲ ಪಡೆದರೈತರಿಗೆ ಬೆಳೆ ವಿಮೆ ನೊಂದಣಿಕಡ್ಡಾಯವಾಗಿದ್ದು, ಬೆಳೆ ಸಾಲ ಪಡೆಯದರೈತರುಐಚ್ಛಿಕವಾಗಿಬೆಳೆ ವಿಮೆಗೆ ನೊಂದಾಯಿಸಿಕೊಳ್ಳಬಹುದಾಗಿದೆ.

ರೈತರು ಬೆಳೆ ವಿಮೆಗೆ ನೊಂದಾಯಿಸಲು ಅರ್ಜಿಯೊಂದಿಗೆ ಭೂಮಿ ಹೊಂದಿರುವುದಕ್ಕೆ ದಾಖಲೆಗಳಾದ ಪಹಣಿ, ಖಾತೆ ಪುಸ್ತಕ, ಕಂದಾಯ ರಶೀದಿ, ಆಧಾರ್ ಸಂಖ್ಯೆ ನೀಡುವುದು. ರೈತರು ಹತ್ತಿರದ ಬ್ಯಾಂಕ್, ಕರ್ನಾಟಕಒನ್, ಗ್ರಾಮಒನ್ ಹಾಗೂ ಸಾಮಾನ್ಯ ಸೇವಾ ಕೇಂದ್ರಗಳಲ್ಲಿ ಬೆಳೆ ವಿಮೆಗೆ ನೊಂದಾಯಿಸಿಕೊಳ್ಳಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ, ಕಂದಾಯ ಇಲಾಖೆ, ಸಹಕಾರ ಇಲಾಖೆ ಮತ್ತು ಸಾಲ ನೀಡುವ ಬ್ಯಾಂಕ್‌ಅಥವಾ ಸಹಕಾರಿ ಬ್ಯಾಂಕುಗಳನ್ನು ಸಂಪರ್ಕಿಸಬಹುದಾಗಿದೆ ಎಂದು ತಿಳಿಸಿದರು. ಇದೇ ಸಂದರ್ಭದಲ್ಲಿ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯ ಪೋಸ್ಟರ್ ಹಾಗೂ ಬಿತ್ತಿ ಪತ್ರ ಬಿಡುಗಡೆ ಮಾಡಲಾಯಿತು. ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿ ಕೃಷ್ಣಮೂರ್ತಿ, ಜಂಟಿ ಕೃಷಿ ನಿರ್ದೇಶಕ ಪಿ. ರಮೇಶ್ ಕುಮಾರ್, ತೋಟಗಾರಿಕೆ ಇಲಾಖೆ ಉಪ ನಿರ್ದೇಶಕಿ ಮಂಗಳ, ಲತಾ ಸರಸ್ವತಿ ಹಾಗೂ ಇತರರಿದ್ದರು.

## ಬಾಕಿ ವೇತನಕ್ಕಾಗಿ ಆಗ್ರಹಿಸಿ ಕಾರ್ಮಿಕರ ಧರಣಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್

ಹಾಸನ: ಕಾರ್ಮಿಕರಿಗೆ ಬಾಕಿ ವೇತನ ಪಾವತಿಸದೆ ಫ್ಯಾಕ್ಟರಿ ಆಡಳಿತ ಮಂಡಳಿ ಮೋಸ ಮಾಡಿದೆ ಎಂದು ಆರೋಪಿಸಿ ಶುಕ್ರವಾರ ಕೈಗಾರಿಕಾ ಪ್ರದೇಶದಲ್ಲಿರುವ ನ್ಯೂ ಮಿನರ್ವ್ ಕಾರ್ಖಾನೆ ಎದುರು ನ್ಯೂ ಮಿನರ್ವ್ ಮಿಲ್ ವರ್ಕರ್ಸ್ ಯೂನಿಯನ್ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಯಿತು.

ಎಐಟಿಯುಸಿ ಜಿಲ್ಲಾಧ್ಯಕ್ಷ ಎಂ.ಸಿ. ಡೋಂಗ್ರೆ ಮಾತನಾಡಿ, ನ್ಯೂ ಮಿನರ್ವ್ ಮಿಲ್ ಸಂಸ್ಥೆಯು ರಾಷ್ಟ್ರೀಯ ಟೆಕ್ಸ್‌ಟೈಲ್ಸ್ ಕಾರ್ಪೊರೇಷನ್ (ಎನ್‌ಟಿಸಿ) ಅಧೀನಕ್ಕೆ ಒಳಪಟ್ಟಿದೆ. ದೇಶದಾದ್ಯಂತ 23 ಘಟಕ ಹೊಂದಿದ್ದ ಎನ್‌ಟಿಸಿ 2020ರ ಮಾರ್ಚ್‌ನಿಂದ ಎಲ್ಲಾ ಫ್ಯಾಕ್ಟರಿಗಳನ್ನು ನಷ್ಟ ಹಾಗು ಉತ್ಪಾದನೆ ಕುಸಿತ ನೆಪವೊಡ್ಡಿ ಬಂದ್ ಮಾಡಿದೆ. ಹಾಸನದ ಈ ಫ್ಯಾಕ್ಟರಿಯಲ್ಲಿ 480 ಕಾರ್ಮಿಕರು ಕೆಲಸ ಮಾಡುತ್ತಿದ್ದರು. ಅದರಲ್ಲಿ 184 ಖಾಯಂ ಕಾರ್ಮಿಕರಿಗೆ ಪ್ರತಿ ತಿಂಗಳು ಅರ್ಧ ವೇತನ ಪಾವತಿಯಾಗುತ್ತಿತ್ತು.




ಆದರೆ ಏಳು ತಿಂಗಳಿಂದ ಅರ್ಧ ವೇತನ ಪಾವತಿಯಾಗದೆ ತೊಂದರೆಯಾಗಿದೆ ಎಂದು ಆರೋಪಿಸಿದರು.

ಈ ವೃತ್ತಿಯನ್ನೇ ನಂಬಿದ್ದ ಕಾರ್ಮಿಕರಿಗೆ ಫ್ಯಾಕ್ಟರಿ ಮುಚ್ಚಿ ಅತಂತ್ರಗೊಳಿಸಿದ್ದಾರೆ. ಕೊನೆಯ ಪಕ್ಷ ಕಾರ್ಮಿಕ ಕಾಯ್ದೆಯಂತೆ ಅರ್ಧ ವೇತನವನ್ನಾದರೂ ಸರಿಯಾಗಿ ನೀಡಬೇಕು. ವೇತನ ಸ್ಥಗಿತಗೊಂಡಿರುವುದರಿಂದ ಈಎಸ್‌ಐ, ಪಿಎಫ್‌ಗೂ ಸಮಸ್ಯೆಯಾಗಿದೆ. ಈ ಎಲ್ಲಾ ಸಮಸ್ಯೆಗಳ ಕುರಿತು ವ್ಯವಸ್ಥಾಪಕರನ್ನು ಪ್ರಶ್ನಿಸಿದರೂ ಪ್ರಯೋಜನವಾಗಿಲ್ಲ. ಹೀಗಾಗಿ ಪ್ರತಿಭಟನೆ ಅನಿವಾರ್ಯವಾಗಿದೆ ಎಂದರು.

ಜಿಲ್ಲಾಡಳಿತ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಬೇಕು. ಕಾರ್ಮಿಕರ ಬಾಕಿ ವೇತನ ಕಲ್ಪಿಸಿಕೊಡುವುದರ ಜೊತೆಗೆ ಕಾರ್ಖಾನೆ ಆರಂಭಕ್ಕೆ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಎಐಟಿಯುಸಿ ಪ್ರಧಾನ ಕಾರ್ಯದರ್ಶಿ ಬಿ.ಎಂ. ಮಧು, ಉಪಾಧ್ಯಕ್ಷ ಜೆ.ಆರ್. ಸಂತೋಷ್, ಕಾರ್ಯದರ್ಶಿ ಹೆಚ್.ಎಸ್. ಮಂಜೇಗೌಡ, ಖಜಾಂಚಿ ಜೆ.ಸಿ. ಲೋಕೇಶ್ ಹಾಗೂ ಇತರರಿದ್ದರು.

## ಬಸವೇಶ್ವರರ ಹೋರಾಟ ಅಜರಾಮರ: ಸೋಮಶೇಖರ್

ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್

ಸಕಲೇಶಪುರ: ಜಾತಿ ಪದ್ಧತಿ, ಸ್ತ್ರೀ ಅಸಮಾನತೆ ಹಾಗು ಅಸ್ಪೃಶ್ಯತೆ ವಿರುದ್ಧ ಬಸವಣ್ಣ ನಡೆಸಿದ ಹೋರಾಟ ಸಾರ್ವಕಾಲಿಕ ಎಂದು ನಿವೃತ್ತ ಐಎಎಸ್ ಅಧಿಕಾರಿ ಸೋಮಶೇಖರ್ ಹೇಳಿದರು.

ಪಟ್ಟಣದ ಗುರುವೇಗೌಡ ಕಲ್ಯಾಣ ಮಂಟಪದಲ್ಲಿ ತಾಲ್ಲೂಕು ಮಲೆನಾಡು ವೀರಶೈವ ಸಮಾಜದಿಂದ ಹಮ್ಮಿಕೊಂಡಿದ್ದ ಬಸವೇಶ್ವರ ಕಂಚಿನ ಪುತ್ಥಳಿ ಲೋಕಾರ್ಪಣೆ ವಾರ್ಷಿಕೋತ್ಸವ ಉದ್ಘಾಟಿಸಿ ಮಾತನಾಡಿ, 12ನೇ ಶತಮಾನದಲ್ಲಿ ಸಾಮಾಜಿಕ ಅಸಮಾನತೆ ತುಂಬಿ ತುಳುಕುತ್ತಿದ್ದ ವೇಳೆ ಜನ್ಮತಾಳಿದ ಬಸವಣ್ಣ, ಸಮಾಜ ಸುಧಾರಣೆಗಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟವರು. ಭೂಮಿಯ ಮೇಲೆ ಹುಟ್ಟಿದ ಯಾವ ದಾರ್ಶನಿಕರೂ ಮಹಿಳೆಯರ ಬಗ್ಗೆ ಮಾತನಾಡಲು ಚಿಂತಿಸದ ಕಾಲದಲ್ಲಿ ಮಹಿಳೆಯರಿಗೆ ಸಮಾನತೆ ಕಲ್ಪಿಸಿದವರು ಬಸವಣ್ಣ. ಕಾಯಕ ಸಿದ್ಧಾಂತವನ್ನು




ಜಗತ್ತಿಗೆ ಪರಿಚಯಿಸಿದ ಕೀರ್ತಿ ಬಸವಣ್ಣ ಅವರಿಗೆ ಸಲ್ಲುತ್ತದೆ. ಪ್ರಪಂಚದ ಮೊದಲ ಪಾರ್ಲಿಮೆಂಟ್ ಅನ್ನು ಬಸವಣ್ಣ ಸ್ಥಾಪಿಸಿದರು. ಅವರ ವಚನಗಳ ಸಾರವನ್ನು ಮಕ್ಕಳಿಗೆ ಬೋಧಿಸಬೇಕು. ಇದರಿಂದ ಮಕ್ಕಳಲ್ಲಿ ಸಂಸ್ಕಾರ, ಸಂಸ್ಕೃತಿ ವೃದ್ಧಿಸಿ ಜೀವನದ ಪಾಠವಾಗಲಿದೆ ಎಂದರು.

ನಮ್ಮ ಸಂವಿಧಾನವನ್ನು ಹಲವು ಬಾರಿ ಬದಲಾಯಿಸಲಾಗಿದೆ, ಆದರೆ ಬಸವಣ್ಣನವರ ವಚನಗಳ ಸಾಲು ಒಮ್ಮೆಯೂ ಬದಲಾಗಿಲ್ಲ. ಇಂತಹ ಮಹಾನುಭಾವರ ಜೀವನವನ್ನು ಜೀವನದಲ್ಲಿ ಅಳವಡಿಸಿಕೊಂಡರೆ ತಾವೂ ಜಗತ್ತಿನಲ್ಲಿ ಪ್ರಜ್ವಲಿಸಬಹುದು. ಪ್ರಪಂಚದ ಎಲ್ಲಾ ಜನರು ನಮ್ಮವರು ಎಂದ ಬಸವಣ್ಣನವರ ಮಾನವ ಧರ್ಮಕ್ಕೆ ಜಯವಾಗಲಿ ಎಂಬ ಸಾಲನ್ನು ಯಾವ ಧರ್ಮದಲ್ಲೂ ಕಾಣಲು ಸಾಧ್ಯವಿಲ್ಲ ಎಂದರು.

ವೀರಶೈವ ಸಮಾಜ ಮುಖಂಡ ಯಡೇಹಳ್ಳಿ ಆರ್. ಮಂಜುನಾಥ್ ಮಾತನಾಡಿ, ವಿಶ್ವ ಸಾಹಿತ್ಯವೇ ಒಂದು ತೂಕವಾದರೆ, ವಚನ ಸಾಹಿತ್ಯದ ತೂಕವೇ ಒಂದು. ಇಂತಹ ವಚನಗಳನ್ನು ನೀಡಿದ ಬಸವಣ್ಣನವರ ಹೆಸರು ಅಜರಾಮರವಾಗಿರಲಿದೆ. ಜಾತಿ ಸಂಕೋಲೆಗಳನ್ನು ಮೆಟ್ಟಿ ನಿಲ್ಲುವ ಮೊದಲ ಯತ್ನ ಬಸವಣ್ಣನವರಿಂದ ನಡೆದಿದೆ. ಇದರಿಂದ ಬಸವಣ್ಣನವರ ಅನುಯಾಯಿಗಳು ಪ್ರತಿನಿಧಿಸುವ ವೀರಶೈವ ಸಮಾಜ, ಇಂದಿಗೂ ಎಲ್ಲ ಸಮಾಜವನ್ನು ನಮ್ಮವರು ಎಂದು ಅಪ್ಪಿಕೊಂಡು ನಡೆಯುವ ಏಕೈಕ ಸಮಾಜವಾಗಿದೆ ಎಂದರು.

ಮಲೆನಾಡು ವೀರಶೈವ ಸಮಾಜದ ಮಾಜಿ ಅಧ್ಯಕ್ಷ ಎಚ್.ಎಂ. ಶಶಿಧರ್ ಅವರನ್ನು ಸನ್ಮಾನಿಸಲಾಯಿತು. ಮಲೆನಾಡು ವೀರಶೈವ ಸಮಾಜದ ಅಧ್ಯಕ್ಷ ಮೂಗಲಿ ಧರ್ಮಪ್ಪ, ಉಪಾಧ್ಯಕ್ಷ ಗಗನ್, ಅಕ್ಕಮಹಾದೇವಿ ಮಹಿಳಾ ವೇದಿಕೆ ಅಧ್ಯಕ್ಷೆ ಕೋಮಲ ದಿನೇಶ್, ಯುವ ವೇದಿಕೆ ಅಧ್ಯಕ್ಷ ಶಶಿಕುಮಾರ್, ಓಂಕಾರಮೂರ್ತಿ, ಮಳಲಿ ಸ್ವಾಮಿ ಹಾಗೂ ಇತರರಿದ್ದರು.

## ಸರ್ಕಾರಿ ಕಲಾ ಕಾಲೇಜಿಗೆ ಎಡಿಬಿ ತಂಡ ಭೇಟಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್

ಹಾಸನ: ಉನ್ನತ ಶಿಕ್ಷಣ ಉನ್ನತೀಕರಣ ಪಟ್ಟಿಗೆ ಸೇರಿರುವ ರಾಜ್ಯದ 14 ಕಾಲೇಜುಗಳಲ್ಲಿ ಹಾಸನದ ಕಲಾ ಹಾಗೂ ವಿಜ್ಞಾನ ಕಾಲೇಜು ಸೇರ್ಪಡೆಯಾಗಿದ್ದು ಶುಕ್ರವಾರ ಏಷಿನಯ್ ಡೆವಲಪ್ಮೆಂಟ್ ಬ್ಯಾಂಕ್ ಸದಸ್ಯರ ತಂಡ ಭೇಟಿ ನೀಡಿತು.

ಎಡಿಬಿ ಸದಸ್ಯರನ್ನು ಕಾಲೇಜು ವಿದ್ಯಾರ್ಥಿಗಳು ವಿದೇಶಿ ಉಡುಪು ಧರಿಸಿ ಸಾಂಸ್ಕೃತಿಕ ಕಲಾ ತಂಡ, ಭರತ ನಾಟ್ಯ ಮೂಲಕ ಬರಮಾಡಿಕೊಂಡರು.

ಕಲಾ ಕಾಲೇಜು ಪ್ರಾಂಶುಪಾಲ ಡಾ. ಎಂ.ಬಿ. ಇರ್ಷಾದ್ ಮಾತನಾಡಿ, ವಿದ್ಯಾರ್ಥಿಗಳ ಬದುಕು ರೂಪಿಸುವಲ್ಲಿ ಉನ್ನತ ಶಿಕ್ಷಣದ ಪಾತ್ರ ಮಹತ್ವದ್ದಾಗಿದೆ ಎಂದು ಹೇಳಿದರು.

ಕಾಲೇಜು ಶಿಕ್ಷಣ ಮತ್ತು ತಾಂತ್ರಿಕ ಇಲಾಖೆ ಕ್ರಾಂತಿಕಾರಿ ಬದಲಾವಣೆ



ಮೂಲಕ ಶಿಕ್ಷಣದಲ್ಲಿ ಸಾಧನೆ ಮೆರೆದಿದೆ. ಉನ್ನತ ಶಿಕ್ಷಣದ ಉದ್ದೇಶ ಕೇವಲ ಪದವಿ ಕೊಟ್ಟು ವಿದ್ಯಾರ್ಥಿಗಳನ್ನು ಕಳುಹಿಸುವುದಲ್ಲ. ಪದವಿಯೊಂದಿಗೆ ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು ನೆರವಾಗುವುದಾಗಿದೆ ಎಂದರು.

ಉನ್ನತ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುವುದು ಎಡಿಬಿಯ ಉದ್ದೇಶ. ಕಾಲೇಜುಗಳ ನಿರ್ವಹಣೆ, ವಿದ್ಯಾರ್ಥಿಗಳಿಗೆ ಕೌಶಲ ಕಲಿಸುವುದು, ಸಂವಹನ, ತಂತ್ರಜ್ಞಾನ ಬಳಕೆ ಕುರಿತು ವಿಶೇಷ ಕಾರ್ಯಕ್ರಮಗಳನ್ನು ಎಡಿಬಿ ಅಡಿಯಲ್ಲಿ ಹಮ್ಮಿಕೊಳ್ಳಲಾಗುತ್ತದೆ. ಕರ್ನಾಟಕ ಸರ್ಕಾರ ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಹಾಗೂ ಏಷಿಯನ್ ಡೆವಲಪ್ಮೆಂಟ್ ಬ್ಯಾಂಕ್ (ಎಡಿಬಿ) ನಡುವೆ ಆಗಿರುವ ಒಡಂಬಡಿಕೆಯ ಭಾಗವಾಗಿ ಕರ್ನಾಟಕ ಉನ್ನತ ಶಿಕ್ಷಣ ಪರಿವರ್ತನಾ ಯೋಜನೆಯನ್ನು ಜಾರಿಗೆ ತರಲಾಗುತ್ತಿದೆ.

ಕರ್ನಾಟಕದಲ್ಲಿ 14 ಕಾಲೇಜು ಉನ್ನತಿಕರಣಗೊಳಿಸಲು ಏಷ್ಯನ್ ಬ್ಯಾಂಕ್ ಡೆವಲಪ್ಮೆಂಟ್ ತಂಡದ ವ್ಯಾಪ್ತಿಯೊಳಗೆ ತರುತ್ತಿದೆ. ಹಾಸನದಲ್ಲಿ ಸರ್ಕಾರಿ ವಿಜ್ಞಾನ ಕಾಲೇಜು, ಕಲಾ ಕಾಲೇಜು ಹಾಗು ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಮೂರು ಕಾಲೇಜುಗಳಿಗೆ ಈ ಸೌಭಾಗ್ಯ ದೊರಕಿದೆ. ಈ ಕಾಲೇಜುಗಳ ಸಂದರ್ಶನ ಮಾಡಿ ಮೂಲಸೌಕರ್ಯಗಳನ್ನು ಪರಿಶೀಲಿಸಿ ವಿದ್ಯಾರ್ಥಿಗಳಿಗೆ ಮೂಲ ಸೌಕರ್ಯ ಕಲ್ಪಿಸಲಾಗುತ್ತಿದೆ ಎಂದು ಹೇಳಿದರು.

ಕಾಲೇಜು ಶಿಕ್ಷಣ ಮತ್ತು ತಾಂತ್ರಿಕ ಇಲಾಖೆ ನಿರ್ದೇಶಕಿ ಶೋಭಾ ಮತ್ತು ಜಂಟಿ ನಿರ್ದೇಶಕ ಡಾ. ಚಂದ್ರಶೇಖರ್ ಜೊತೆಗೆ ಚೀನಾ, ಹಾಂಕ್‌ಕಾಂಗ್, ಮಲೇಷಿಯ, ಜಪಾನ್ ದೇಶಗಳಿಂದ ಒಟ್ಟು ಒಂಬತ್ತು ಜನರ ತಂಡ ಕಾಲೇಜಿಗೆ ಭೇಟಿ ನೀಡಿದೆ ಎಂದು ತಿಳಿಸಿದರು.

ಹಳೆಯ ವಿದ್ಯಾರ್ಥಿಗಳ ಸಂಘದ ಪ್ರತಿನಿಧಿ ಡಾ. ಡಿ.ಜಿ. ಕೃಷ್ಣೇಗೌಡ ಅವರು, ಸರ್ಕಾರಿ ವಿಜ್ಞಾನ ಕಾಲೇಜು ಮತ್ತು ಕಾಲೇಜಿನ ವಿದ್ಯಾರ್ಥಿಗಳಿಗೆ ಜಾಗತಿಕ ಸವಾಲುಗಳನ್ನು ಎದುರಿಸಲು ಅವಶ್ಯಕವಾದ ಹಣಕಾಸಿನ ನೆರವನ್ನು ನೀಡಬೇಕೆಂದು ಎಡಿಬಿ ತಜ್ಞರ ಸಮಿತಿಗೆ ಮನವಿ ಮಾಡಿದರು.

ಎಡಿಬಿ ಸದಸ್ಯರಾದ ಫೂಕ್ ಎನ್ ಚಾಂಗ್, ಮೊಹಮ್ಮದ್ ಫೈಜ್ ಶೌಲ್ ಹಮೀದ್, ನಹ್ಯೂಮ್ ಕಿಮ್, ಪೂನಂ ಶರ್ಮಾ ಬಾಂಬ್ರಿ, ಶೌನ್ ಎಂ. ವೆಲ್ ಬೌರ್ನ್ ವುಡ್, ಯಶಪಾಲ್ ಮಲ್ಲಿಕ್, ಸ್ಯಾಮ್ಯೂಯಲ್, ಡೇವಿಡ್ ಮತ್ತು ಲೇಹ್ ಮ್ಯಾಕ್ ಮ್ಯಾನಸ್, ಪ್ರೊ. ಬಿ. ಚಂದ್ರಶೇಖರ್, ಶೈಕ್ಷಣಿಕ ಡೀನ್ ಡಿ.ಎಸ್. ರಾಜು, ಪರೀಕ್ಷಾ ನಿಯಂತ್ರಕ ಕೆ.ಡಿ. ಮುರಳೀಧರ್, ಪತ್ರಾಂಕಿತ ವ್ಯವಸ್ಥಾಪಕ ಕೆ.ಟಿ. ಸತ್ಯಮೂರ್ತಿ, ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ಕೆ.ವಿ. ಪಾರ್ಥೇಶ್ ಹಾಗೂ ಇತರರಿದ್ದರು.

## ತಗಡೂರು ಗ್ರಾ.ಪಂಗೆ ಹೇಮರಾಜ್ ಅಧ್ಯಕ್ಷ

ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್

ಚನ್ನರಾಯಪಟ್ಟಣ: ತಾಲ್ಲೂಕಿನ ತಗಡೂರು ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಹೇಮರಾಜ್ ಹಾಗೂ ಉಪಾಧ್ಯಕ್ಷರಾಗಿ ಚಂದ್ರಮ್ಮ ಶಂಕರ್ ಅವಿರೋಧ ಆಯ್ಕೆಯಾದರು.

ಸುಕನ್ಯಾ ಬಿ. ಕುಮಾರ್ ಹಾಗೂ ಮಂಜುಳಾ ನಿಂಗಪ್ಪ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಶುಕ್ರವಾರ ಚುನಾವಣೆ ಪ್ರಕ್ರಿಯೆ ನಡೆಯಿತು. ಅಧ್ಯಕ್ಷ ಸ್ಥಾನಕ್ಕೆ ಹೇಮರಾಜ್ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಚಂದ್ರಮ್ಮ ಶಂಕರ್ ಮಾತ್ರ ನಾಮಪತ್ರ ಸಲ್ಲಿಸಿದ್ದರಿಂದ ಚುನಾವಣಾಧಿಕಾರಿ ತಹಶೀಲ್ದಾರ್ ಸಂತೋಷ್‌ಕುಮಾರ್ ಅವಿರೋಧ ಆಯ್ಕೆ ಘೋಷಿಸಿದರು.

ಅಧ್ಯಕ್ಷ ಹೇಮರಾಜ್ ಮಾತನಾಡಿ, ತಮಗೆ ಸಿಕ್ಕಿರುವ ಅಧಿಕಾರವನ್ನು ಬಳಸಿಕೊಂಡು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಳ್ಳಿಗಳಲ್ಲಿ ಕುಡಿಯುವ



ನೀರು, ಸ್ವಚ್ಛತೆ, ರಸ್ತೆ ಹಾಗೂ ಒಳಚರಂಡಿ ಸೇರಿದಂತೆ ವಿವಿಧ ಅಭಿವೃದ್ಧಿ ಕೆಲಸಗಳಿಗೆ ಆದ್ಯತೆ ನೀಡಲಾಗುವುದು ಎಂದರು.

ಗ್ರಾಮ ಪಂಚಾಯಿತಿ ಸದಸ್ಯರಾದ ಕೆ.ಜೆ. ಶಂಕರ್, ಮಾಲಿಂಗೇಗೌಡ, ಕೆ.ಪಿ. ಕುಮಾರ್, ರೇಖಾ ಮಂಜ ಬೋವಿ, ಮುಖಂಡರಾದ ಓಬಳಾಪುರ ಬಸವರಾಜ್, ತಮ್ಮಯಣ್ಣ, ಬೆಳಗೀಹಳ್ಳಿ ಪುಟ್ಟಸ್ವಾಮಿ, ನಾಗೇಶ್, ಬೂವನಹಳ್ಳಿ ವಡ್ಡರಟ್ಟಿ ನಾಗರಾಜ್, ನಿವೃತ್ತ ಶಿಕ್ಷಕ ಈರಯ್ಯ, ನಿಂಗೇಗೌಡ, ದೇವರಾಜ್, ಪ್ರಮೋದ್, ಯತೀಶ್ ಕುಮಾರ್, ಪ್ರಸನ್ನ, ದಿಲೀಪ್, ವೀರಶೈವ ಯುವ ಮುಖಂಡ ವಿಜಯ್ ಕುಮಾರ್, ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಜ್ಯೋತಿ ಹಾಗೂ ಇತರರಿದ್ದರು.

## ಜೀ ಕನ್ನಡ ವಾಹಿನಿಯಲ್ಲಿ ಕರ್ಣ ಧಾರಾವಾಹಿ

ಬೆಂಗಳೂರು: ವಿಧಿಯಾಟದ ವಿರುದ್ಧ ಪ್ರೀತಿಯ ಹೋರಾಟ ಬರ್ತಿದೆ ಕರ್ಣ. ವಿಭಿನ್ನವಾದ ಕಥೆಯುಳ್ಳ ಧಾರಾವಾಹಿಗಳು, ವಿನೋದಮಯವಾದ ಕಾನ್ಸೆಪ್ಟ್ ಇರೋ ಗೇಮ್ ಶೋಗಳು ಮತ್ತು ಸೂಪರ್ ಹಿಟ್ ಚಲನಚಿತ್ರಗಳನ್ನು ಪ್ರಸಾರ ಮಾಡುವ ಮೂಲಕ ಜನರ ಮನಗೆದ್ದು ಮನರಂಜನೆಯ ಮಹಾರಾಜ ಎಂದು ಖ್ಯಾತಿ ಪಡೆದ ವಾಹಿನಿ ಜೀ಼ ಕನ್ನಡ. ಈಗ ಜೀ಼ ಕನ್ನಡ ವಾಹಿನಿ ಪ್ರೀತಿಯ ವೀಕ್ಷಕರನ್ನು ಮನರಂಜಿಸಲು ಮತ್ತೊಂದು ಅಮೋಘ ಧಾರಾವಾಹಿಯನ್ನು ಹೊತ್ತುತರಲಿದೆ. ಟಿಕರ್ಣಟಿ ಎಂಬ ಶೀರ್ಷಿಕೆಯುಳ್ಳ ಈ ಧಾರಾವಾಹಿಯು ಭಾವನೆಗಳಿಗೆ ಒತ್ತು ಕೊಟ್ಟಿರುವುದರಿಂದ ಎಲ್ಲಾ ವಯೋಮಿತಿಯ ಜನರನ್ನು ತನ್ನತ್ತ ಸೆಳೆಯುವಲ್ಲಿ ಯಶಸ್ವಿ ಆಗಲಿದೆ ಎಂದರೆ ತಪ್ಪಾಗಲ್ಲ. ಕರ್ಣ ಧಾರಾವಾಹಿಯ ಮೊದಲ ಪ್ರೊಮೊ ಬಿಡುಗಡೆ ಆದ ಸ್ವಲ್ಪ ಹೊತ್ತಿಗೆ ಸಕತ್ ವೈರಲ್ ಆಗಿದ್ದು ಕನ್ನಡಿಗರ ಮನಗೆದ್ದಿದೆ. ಸಿನೆಮಾಟೋಗ್ರಫಿ, ನಿರ್ದೇಶನ, ಕಿರಣ್ ರಾಜ್ ನಟನೆ ಬಗ್ಗೆ ಪ್ರೇಕ್ಷಕರು ಅತಿಯಾದ ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದಾರೆ. ಮತ್ತೊಂದು ಸರ್ಪ್ರೈಸ್ ಎಂಬಂತೆ ವಾಹಿನಿ ಭವ್ಯ ಗೌಡ-ಕಿರಣ್ ರಾಜ್ ಹಾಡನ್ನು ಬಿಟ್ಟಿದ್ದು ಇವರಿಬ್ಬರ ಕೆಮಿಸ್ಟ್ರಿ ಪ್ರೇಕ್ಷಕರ ಮನದಲ್ಲಿ ಕಚಗುಳಿ ಎಬ್ಬಿಸಿದೆ.

ಅಷ್ಟೇ ಅಲ್ಲದೇ ಪ್ರೊಮೊ ಮತ್ತು ಹಾಡು ಎರಡೂ ಸಕತ್ ಆಗಿ ಮೂಡಿ ಬಂದಿದ್ದು ಧಾರಾವಾಹಿಯನ್ನು ನೋಡಲು ಜನರು ಹಾತೊರೆಯುತ್ತಿದ್ದಾರೆ.

ಇನ್ನು ನಟ ಕಿರಣ್ ರಾಜ್ ಮರಳಿ ಕಿರುತೆರೆಗೆ ಬರುತ್ತಿರುವುದು ಅವರ ಅಭಿಮಾನಿಗಳಲ್ಲಿ ಉತ್ಸುಕತೆ ಹೆಚ್ಚಿಸಿದೆ. ಅಷ್ಟೇ ಅಲ್ಲದೇ ಕಿರುತೆರೆಯಲ್ಲಿ ತನ್ನದೇ ಆದ ಛಾಪನ್ನು ಮೂಡಿಸಿದ ಭವ್ಯ ಗೌಡ ಮತ್ತು ನಮ್ರತಾ ಗೌಡ ಅವರು ಕಿರಣ್ ರಾಜ್ ಅವರಿಗೆ ಜೋಡಿಯಾಗಿ ನಟಿಸಲಿದ್ದಾರೆ.

ಇನ್ನು ಈ ಫ್ರೆಶ್ ಜೋಡಿಯ ಮೋಡಿ ಹೇಗಿರಲಿದೆ ಎಂಬ ಕುತೂಹಲ ಪ್ರೇಕ್ಷಕರಲ್ಲಿ ಹೆಚ್ಚಾಗಿದೆ. ಅಷ್ಟೇ ಅಲ್ಲದೇ ಕರ್ಣ ಪ್ರೊಮೊ ಸೋಶಿಯಲ್ ಮೀಡಿಯಾದಲ್ಲಿ ಸಕತ್ ಸದ್ದು ಮಾಡಿದ್ದು ಅಲ್ಲದೇ ಕಾಮೆಂಟ್ ಸೆಕ್ಷನ್‌ಗಳು ಪಾಸಿಟಿವ್ ಕಾಮೆಂಟ್‌ಗಳಿಂದ ತುಂಬಿವೆ. ಶ್ರುತಿ ನಾಯ್ಡು ಪ್ರೊಡ್ಯೂಸ್ ಮಾಡುತ್ತಿರುವ ಈ ಧಾರಾವಾಹಿಯಲ್ಲಿ ಹಿರಿಯ ನಟರಾದ ಅಶೋಕ್, ನಾಗಾಭರಣ ಸೇರಿ ಹಲವಾರು ದಿಗ್ಗಜರು ಅಭಿನಯಿಸಿದ್ದಾರೆ.

ನಿಷ್ಕಲ್ಮಶ ಮನಸ್ಸಿನ ಕರ್ಣನಿಗೆ ನಿಷ್ಕಲ್ಮಶ ಪ್ರೀತಿ, ಅಪ್ಪನ ಪ್ರೀತಿ, ಮನೆಯವರ ಒಪ್ಪಿಗೆಯ ಅಪ್ಪುಗೆ ಸಿಗುತ್ತಾ. ತಿಳ್ಕೊಳೋಕೆ ವೀಕ್ಷಿಸಿ ಕರ್ಣ ಇದೇ 16 ರಿಂದ ರಾತ್ರಿ 8 ಗಂಟೆಗೆ.






## 10.58 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕಳವು

ಹಾಸನ: ನಗರದ ವಿಜಯ ನಗರ ಬಡಾವಣೆಯಲ್ಲಿ ಮನೆ ಬಾಗಿಲು ಮುರಿದು ಒಳನುಗ್ಗಿರುವ ಕಳ್ಳರು ನಗದು ಸೇರಿ 10.58 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕಳವು ಮಾಡಿದ್ದಾರೆ. ದೇವರಾಯಪಟ್ಟಣದ ಟಿಪ್‌ಟಾಪ್ ಫರ್ನಿಚರ್ಸ್ ಅಂಗಡಿಯಲ್ಲಿ ಉದ್ಯೋಗಿ ಎ.ಆರ್. ಸೌಮ್ಯ ಅವರ ಮನೆಯಲ್ಲಿ ಕಳ್ಳತನವಾಗಿದೆ. ಸೌಮ್ಯ ಹಾಗೂ ಅವರ ಪತಿ ಮನೆಗೆ ಬೀಗ ಹಾಕಿ ಕೆಲಸಕ್ಕೆ ತೆರಳಿದ್ದರು. ಸಂಜೆ ಬಂದು ನೋಡಿದಾಗ ಮನೆ ಬೀಗ ಮುರಿದಿರುವುದು ತಿಳಿದಿದೆ. ಬಲವಾದ ಆಯುಧದಿಂದ ಬೀಗ ಮುರಿದು ಒಳನುಗ್ಗಿರುವ ಕಳ್ಳರು ಬೀರುವಿನಲ್ಲಿಟ್ಟಿದ್ದ 25 ಗ್ರಾಂ ತೂಕದ ಚಿನ್ನದ ಸರ, 50 ಗ್ರಾಂ ತೂಕದ ಚಿನ್ನದ ಮಾಂಗಲ್ಯ ಸರ, 20 ಗ್ರಾಂ ತೂಕದ ಚಿನ್ನದ ಸರ, 30 ಗ್ರಾಂ ತೂಕದ 3 ಚಿನ್ನದ ಮಕ್ಕಳ ಸರ, 9 ಗ್ರಾಂ ತೂಕದ 3 ಮಕ್ಕಳ ಚಿನ್ನದ ಉಂಗುರ, 3 ಗ್ರಾಂ ತೂಕದ ಮಕ್ಕಳ ಚಿನ್ನದ ಉಂಗುರ, 2 ಗ್ರಾಂ ತೂಕದ ಒಂದು ಜೊತೆ ಚಿಕ್ಕ ಚಿನ್ನದ ಓಲೆ, 3 ಗ್ರಾಂ ತೂಕದ ಚಿನ್ನದ ಹ್ಯಾಂಗಿಂಗ್ಸ್, 2 ಗ್ರಾಂ ತೂಕದ 1 ಜೊತೆ ಚಿನ್ನದ ಹರಳಿನ ಓಲೆ, 30 ಗ್ರಾಂ ತೂಕದ ಚಿನ್ನದ ಬಳೆ ಹಾಗು 1.35 ಲಕ್ಷ ರೂ. ಕಳುವಾಗಿದೆ. ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಇತಿಹಾಸದಲ್ಲಿ ಈ ದಿನ

## ಜೂನ್ -14

**1949:** ಹಿಂದಿ ಭಾಷೆಗೆ ಭಾರತದ ಸರ್ಕಾರವು ರಾಜಭಾಷೆಯ ಸ್ಥಾನ ನೀಡಲು ನಿರ್ಧರಿಸಿತು. ಇದು ಭಾರತದ ಭಾಷಾ ನೀತಿಯ ಇತಿಹಾಸದಲ್ಲಿ ಪ್ರಮುಖ ಹೆಜ್ಜೆ.

**1951:** ಭಾರತದಲ್ಲಿ ಮೊದಲ ಶಸ್ತ್ರಚಿಕಿತ್ಸಾ ಪದವಿಧರ ವೈದ್ಯಕೀಯ ವಿದ್ಯಾರ್ಥಿಗಳ ಬ್ಯಾಚ್ ಅಲಿಗಢ್ ಮುಸ್ಲಿಂ ವಿಶ್ವವಿದ್ಯಾಲಯದಿಂದ ಪಾಸ್ ಆಯಿತು.

**1971:** ಮಾಜಿ ಪ್ರಧಾನಿ ಇಂದಿರಾ ಗಾಂಧಿ ಅವರು ಭಾರತದ ಮೊದಲ ಅಣುಬಾಂಬ್ ಪರೀಕ್ಷೆ ನಡೆಸಲು ಅನುಮೋದನೆ ನೀಡಿದರು.

**2002:** ಜ್ಞಾನಪೀಠ ಪುರಸ್ಕೃತ ಕನ್ನಡ ಕವಿ ಕುವೆಂಪು ಅವರ ಹೆಸರಿನಲ್ಲಿ ಸ್ಥಾಪಿತವಾದ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಅಧಿಕೃತವಾಗಿ ಪ್ರಾರಂಭವಾಯಿತು.

### ಜನನ

**1928:** ಚೇತನ್ ಆನಂದ್, ಪ್ರಸಿದ್ಧ ಭಾರತೀಯ ಚಲನಚಿತ್ರ ನಿರ್ದೇಶಕ, ನಿರ್ಮಾಪಕ ಮತ್ತು ಕಥಾ ಸಂಗ್ರಹಕಾರ.

**1945:** ಕಪಿಲ್ ದೇವ್, ಭಾರತೀಯ ಕ್ರಿಕೆಟ್‌ನ ಅಲ್ರೌಂಡರ್, 1983ರ ವಿಶ್ವಕಪ್ ವಿಜೇತ ತಂಡದ ನಾಯಕ.

**1956:** ರಾಜು ಶ್ರೀವಾಸ್ತವ, ಪ್ರಸಿದ್ಧ ಹಾಸ್ಯನಟರು ಮತ್ತು ರಾಜಕಾರಣಿ.

### ಮರಣ

**2008:** ಕೃಷ್ಣನಂದ ಮಿಶ್ರಾ, ಭಾರತೀಯ ಸಾಹಿತ್ಯ ಲೋಕದ ಪ್ರಸಿದ್ಧ ವಿಮರ್ಶಕರು ಮತ್ತು ಲೇಖಕ.

**2013:** ಸಮೀರ್ ಖಾಖರ್, ಹಿಂದಿ ಟಿವಿ ಮತ್ತು ಚಲನಚಿತ್ರ ನಟ.

# ಕೆಪಿಎಸ್ ಆರಂಭಕ್ಕೆ ಕೂಡಿ ಬಾರದ ಕಾಲ

## ಹೆಚ್.ಡಿ. ಕುಮಾರಸ್ವಾಮಿ ಅವಧಿಯಲ್ಲಿ ಜಾರಿಯಾದ ಯೋಜನೆ । ಮಾತುಕೊಟ್ಟು ಮರೆತ ಸರ್ಕಾರ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಹೋಬಳಿಗೊಂದು ಕರ್ನಾಟಕ ಪಬ್ಲಿಕ್ ಶಾಲೆ (ಕೆಪಿಎಸ್) ತೆರೆಯುವುದಾಗಿ ಹೇಳಿದ್ದ ರಾಜ್ಯ ಸರ್ಕಾರದ ಭರವಸೆ ಕೇವಲ ಕಾಗದದಲ್ಲೇ ಉಳಿದಿದ್ದು ವಿದ್ಯಾರ್ಥಿಗಳು ಹಾಗು ಪೋಷಕರು ನಿರಾಶೆ ಅನುಭವಿಸುವಂತಾಗಿದೆ.

2023ರ ಆಗಸ್ಟ್‌ನಲ್ಲೇ ಪ್ರಾಥಮಿಕ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರು ಈ ಹೇಳಿಕೆ ನೀಡಿದ್ದರು. ಕೆಪಿಎಸ್ ಶಾಲೆಗಳು ಮಾತ್ರವಲ್ಲದೆ 2 ರಿಂದ 3 ಗ್ರಾಮ ಪಂಚಾಯಿತಿಗೆ ಒಂದು ಆಂಗ್ಲ ಮಾಧ್ಯಮ ಹಾಗೂ ಕನ್ನಡ ಮಾಧ್ಯಮ ಶಾಲೆ ತೆರೆಯಲಾಗುವುದು ಎಂದಿದ್ದರು. ಆದರೆ ಆ ನಿಟ್ಟಿನಲ್ಲಿ ಯಾವ ಪ್ರಗತಿಯೂ ಆಗದೆ ಇರುವುದರಿಂದ ಶಿಕ್ಷಣ ಇಲಾಖೆ ಅಧಿಕಾರಿಗಳು ಸಹ ಕೈಕಟ್ಟಿ ಕುಳಿತಿದ್ದಾರೆ.




> ಹೋಬಳಿಗೊಂದು ಕರ್ನಾಟಕ ಪಬ್ಲಿಕ್ ಶಾಲೆ ಆರಂಭಿಸುವುದಾಗಿ ಸರ್ಕಾರ ಘೋಷಿಸಿತ್ತಾದರೂ ಈ ವರೆಗೆ ಯಾವುದೇ ಆದೇಶ ಬಂದಿಲ್ಲ. ಜಿಲ್ಲೆಯ 15 ಕಡೆ ಕೆಪಿಎಸ್ ಆರಂಭಿಸುವ ಕುರಿತು ಮಾಹಿತಿ ನೀಡಿದ್ದೇವೆ. ಇಲ್ಲಿವರೆಗೆ ಪ್ರತಿಕ್ರಿಯೆ ಬಂದಿಲ್ಲ. ಜಿಲ್ಲೆಯಲ್ಲಿ ಕೆಪಿಎಸ್‌ಗೆ ಬೇಡಿಕೆ ಇದೆ.
>
> **- ಹೆಚ್.ಎಸ್. ಚಂದ್ರಶೇಖರ್, ಡಿಡಿಪಿಐ**

### ಹೆಚ್.ಡಿ.ಕೆ. ಸರ್ಕಾರದ ಯೋಜನೆ

ಸರ್ಕಾರಿ ಶಾಲೆಗಳತ್ತ ಮಕ್ಕಳ ಸೆಳೆಯಬೇಕು ಹಾಗು ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ಲಭ್ಯವಾಗಬೇಕೆಂಬ ಉದ್ದೇಶದಿಂದ 2018ರಲ್ಲಿ ಮುಖ್ಯಮಂತ್ರಿಯಾಗಿದ್ದ ಹೆಚ್.ಡಿ. ಕುಮಾರಸ್ವಾಮಿ ಅವರು ಕೆಪಿಎಸ್ ಯೋಜನೆ ಅನುಷ್ಠಾನಗೊಳಿಸಿದರು. ವಿದ್ಯಾರ್ಥಿಗಳಿಗೆ ಒಂದೇ ಸಂಸ್ಥೆಯಲ್ಲಿ ಗುಣಮಟ್ಟದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ನೀಡುವ ಉದ್ದೇಶದಿಂದ ಒಂದೇ ಕಡೆ 1 ರಿಂದ 12ನೇ ತರಗತಿಗಳನ್ನು ಹೊಂದಿರುವ ಪ್ರಾಥಮಿಕ, ಪ್ರೌಢ ಹಾಗು ಪದವಿ ಪೂರ್ವ ಕಾಲೇಜುಗಳನ್ನು ಒಗ್ಗೂಡಿಸಿ 2018-19ನೇ ಸಾಲಿನಿಂದ ಕರ್ನಾಟಕ ಪಬ್ಲಿಕ್ ಶಾಲೆ ಆರಂಭಿಸಲಾಯಿತು. ಕೆಪಿಎಸ್ ಶಾಲೆಗೆ ಪ್ರತಿವರ್ಷ 5 ಲಕ್ಷ ರೂ. ಅನುದಾನ ಲಭ್ಯವಾಗುವುದರಿಂದ ಇತರ ಶಾಲೆಗಳಿಗಿಂತ ಇವು ವಿಭಿನ್ನ ಎನಿಸಿಕೊಳ್ಳುತ್ತವೆ. ಕೆಪಿಎಸ್‌ಗಳಿಗೆ ನುರಿತ ಶಿಕ್ಷಕರು ಇರುವುದರಿಂದ ಎಸ್‌ಎಸ್‌ಎಲ್‌ಸಿ ಫಲಿತಾಂಶವು ಆಶಾದಾಯಕವಾಗಿರುತ್ತದೆ. ಹೀಗಾಗಿ ಬಹುತೇಕ ಪೋಷಕರು ತಮ್ಮ ಮಕ್ಕಳನ್ನು ಕರ್ನಾಟಕ ಪಬ್ಲಿಕ್ ಸ್ಕೂಲ್‌ಗೆ ಸೇರಿಸಲು ಬಯಸುತ್ತಾರೆ. ಪ್ರಸ್ತುತ ರಾಜ್ಯ ಸರ್ಕಾರ ಘೋಷಿಸಿದಂತೆ ಶಾಲೆಗಳನ್ನು ಆರಂಭಿಸದೇ ಇರುವುದು ಅಸಮಾಧಾನಕ್ಕೆ ಕಾರಣವಾಗಿದೆ.

### 15 ಶಾಲೆಗಳ ಕಾರ್ಯನಿರ್ವಹಣೆ

ಕೆಪಿಎಸ್‌ಗಳಿಗೆ ಸರ್ಕಾರದಿಂದ ಹೆಚ್ಚಿನ ಅನುದಾನ ಹಾಗೂ ಮೂಲಸೌಕರ್ಯಗಳು ಅಧಿಕ ಪ್ರಮಾಣದಲ್ಲಿ ಬರುವುದರಿಂದ ವಿದ್ಯಾರ್ಥಿಗಳು ಕರ್ನಾಟಕ ಪಬ್ಲಿಕ್ ಶಾಲೆಗೆ ಸೇರಲು ಬಯಸುತ್ತಾರೆ. ಸದ್ಯ ಕಾರ್ಯನಿರ್ವಹಿಸುತ್ತಿರುವ 15 ಶಾಲೆಗಳಲ್ಲಿ ಉತ್ತಮ ದಾಖಲಾತಿಯನ್ನು ನೋಡಬಹುದು. ಒಟ್ಟು ಶಾಲೆಯಿಂದ 3075 ಬಾಲಕರು ಹಾಗು 3149 ಬಾಲಕಿಯರು ಸೇರಿ 6219 ಮಕ್ಕಳು ವ್ಯಾಸಂಗ ಮಾಡುತ್ತಿದ್ದಾರೆ. ಆಲೂರು ತಾಲ್ಲೂಕಿನ ರಾಯರಕೊಪ್ಪಲು, ಅರಕಲಗೂಡಿನ ಬಸವಾಪಟ್ಟಣ, ಅರಸೀಕೆರೆಯ ಚಿಂದೆನಹಳ್ಳಿ, ಬೇಲೂರು ತಾಲ್ಲೂಕಿನ ಹಳೇಬೀಡು, ಚನ್ನರಾಯಪಟ್ಟಣ ತಾಲ್ಲೂಕಿನ ನುಗ್ಗೇಹಳ್ಳಿ, ಹಾಸನದ ಮೊಸಳೆಹೊಸಹಳ್ಳಿ, ಬೈಲಹಳ್ಳಿ, ಸೋಮನಹಳ್ಳಿ, ಶಾಂತಿಗ್ರಾಮ, ಹೊಳೆನರಸೀಪುರದಲ್ಲಿ 2, ಹರಿಹರಪುರ, ಸಕಲೇಶಪುರ ತಾಲ್ಲೂಕಿನ ಹೆತ್ತೂರು ಹಾಗೂ ಹಾನುಬಾಳ್‌ನಲ್ಲಿ ಕೆಪಿಎಸ್ ಶಾಲೆ ತೆರೆಯಲಾಗಿದೆ.

### 15 ಸ್ಥಳಗಳ ಪಟ್ಟಿ ಶಿಫಾರಸ್ಸು

ಹೋಬಳಿಗೊಂದು ಕೆಪಿಎಸ್ ಶಾಲೆ ಆರಂಭಿಸುವ ಕುರಿತು ಆದೇಶ ಹೊರಡಿಸಿದ್ದ ಸರ್ಕಾರ ಜಿಲ್ಲಾ ವ್ಯಾಪ್ತಿಯಲ್ಲಿ ಅವಶ್ಯಕತೆ ಇರುವ ಸ್ಥಳಗಳ ಪಟ್ಟಿ ನೀಡುವಂತೆ ಸೂಚಿಸಿತ್ತು. ಅದರಂತೆ ಸಾರ್ವಜನಿಕ ಶಿಕ್ಷಣ ಇಲಾಖೆಯು ಜಿಲ್ಲೆಯ 15 ಕಡೆ ಶಾಲೆಯ ಅವಶ್ಯಕತೆ ಇರುವ ಹಾಗೂ ಇತರ ಮಾಹಿತಿ ನೀಡಿತ್ತು. ಶಾಲೆ ಆರಂಭಿಸಬಹುದಾದ ಸ್ಥಳಗಳಲ್ಲಿ ಕುಡಿಯುವ ನೀರು, ಆಟದ ಮೈದಾನ, ಸಂಚಾರ, ರಸ್ತೆ, ಕಟ್ಟಡ, ವಿದ್ಯಾರ್ಥಿಗಳ ಹಾಜರಾತಿ ಹೀಗೆ ಎಲ್ಲಾ ವಿವರ ನೀಡುವಂತೆ ಸೂಚಿಸಲಾಗಿತ್ತು. ಕ್ಷೇತ್ರ ಶಿಕ್ಷಣಾಧಿಕಾರಿ, ಗ್ರಾಮ ಪಂಚಾಯಿತಿ ಸಮ್ಮುಖದಲ್ಲಿ ಚರ್ಚಿಸಿ ಸರ್ಕಾರಕ್ಕೆ ವರದಿ ಸಲ್ಲಿಸಿ ಒಂದೂವರೆ ವರ್ಷ ಕಳೆದಿದ್ದರೂ ನಂತರದ ಯಾವ ಪ್ರಕ್ರಿಯೆಯೂ ನಡೆದಿಲ್ಲ.

# ಬೇವು ಬಿತ್ತಿ ಮಾವು ಬೆಳೆಯಲು ಸಾಧ್ಯವೇ?

**- ರವಿ ಚಿಕ್ಕನಾಯಕನಹಳ್ಳಿ**

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

(ನಿನ್ನೆಯ ಸಂಚಿಕೆಯ ಮುಂದುವರೆದ ಭಾಗ)



ಅಪ್ರಾಪ್ತ ಬಾಲಕ ಮೊಬೈಲ್‌ನಲ್ಲಿ ಅಸಹ್ಯಕರ ಚಿತ್ರ ವೀಕ್ಷಿಸುತ್ತಾನೆ. ಒಬ್ಬ ಬಾಲಕ ಕ್ರೌರ್ಯ ತುಂಬಿದ ಚಲನಚಿತ್ರದ ಕ್ರೌರ್ಯದ ಮುಖವಾಡದ ಹೀರೋವಿನಂತೆ ಫೋಸ್ ಕೊಡುತ್ತಾ ರೀಲ್ಸ್ ಮಾಡಿ ಸಾಮಾಜಿಕ ಜಾಲತಾಣದಲ್ಲಿ ಹರಿಯ ಬಿಡುತ್ತಾನೆ. ಇವು ಒಂದು ಕ್ರೌರ್ಯದ ಸಂಕೇತವೆನಿಸಿದರೆ ಜಗತ್ತನ್ನೇ ಅರಿಯದ ಕೆಲವು ಕಂದಮ್ಮಗಳು ದುಶ್ಚಟಗಳಿಗೆ ದಾಸರಾಗಿಯೋ, ಪಬ್ಜಿಯಂತಹ ಆಟ ಆಡಿಯೋ, ಅಂಕ ಕಡಿಮೆ ಬಂದವೆಂದೋ, ಮೊಬೈಲ್ ಆಪ್‌ನಲ್ಲಿ ಬೆಟ್ಟಿಂಗ್ ಆಡಿಯೋ ನೇಣಿಗೆ ಶರಣಾದರೆ ಮತ್ತೊಬ್ಬ ಬ್ಲೇಡ್‌ನಿಂದ ರಕ್ತನಾಳ ಕೊಯ್ದುಕೊಂಡ. ಮಗದೊಬ್ಬ ವಿಷ ಸೇವಿಸಿ ಬದುಕನ್ನು ಅಂತ್ಯಗೊಳಿಸಿಕೊಂಡರೆ ಮತ್ತೊಬ್ಬ ಹೆತ್ತವರ ಆಶೆ ಆಕಾಂಕ್ಷೆಗಳಿಗೆ ತಿಲಾಂಜಲಿ ಇಟ್ಟು ತಾನು ಸ್ವರ್ಗವಾಸಿಯಾಗಿದ್ದ! ಹೌದು ಈ ವಿಪ್ಲವಗಳಿಗೆ ಅರ್ಥವೇನಾದರೂ ಉಂಟೆ ಎಂದು ಸೂಕ್ಷ್ಮವಾಗಿ ಗಮನಿಸಿದರೆ ಯಾವೊಂದು ಹೃದಯಾರ್ಪಿತಕ್ಕೆ ಕಾರಣವೇ ಇಲ್ಲ, ಎಲ್ಲವೂ ಬೋಳು ಬೋಳು, ಈ ಎಲ್ಲವಕ್ಕೂ ಉತ್ತರವಿರದ ನಿಶ್ಚಲತೆಯ ನಿರುತ್ತರ, ಹೆತ್ತ ತಂದೆ ತಾಯಿಗಳಿಂದಿಡಿದು ಮುದ್ದು ಮಾಡಿದ ಬಾಂಧವರಿಂದ ಬಂದಂತಹ ಉತ್ತರ ಎಂದರೆ ಗೊತ್ತಿಲ್ಲ ಎಂಬುದೇ ಆಗಿದೆ. ಆದರೆ ಅದಕ್ಕೆ ಸರಿಯಾದ ಉತ್ತರವನ್ನು ಪುರಂದರ ದಾಸರು ತಮ್ಮ ದಾಸ ಸಾಹಿತ್ಯದಲ್ಲಿ

ಬೆಲ್ಲದ ಕಟ್ಟೆಯ ಕಟ್ಟಿ, ಬೇವಿನ ಬೀಜವ ಬಿತ್ತಿ
ಜೇನು ಮಳೆಗರೆದರೆ ವಿಷ ಹೋಗುವುದೇನಯ್ಯ?
ಏನು ನೋಡಿದರೇನು, ಏನು ಕೇಳಿದರೇನು
ಮನದೊಳಗಿನ ತಾಮಸ ಮಾಣದನ್ನಕ
ಕೊಳಲ ಧ್ವನಿಗೆ ಸರ್ಪ ತಲೆದೂಗುವಂದದಿ
ಇದಕೇನು ಮದ್ದು ಶ್ರೀಪುರಂದರವಿಠಲ.

ಎನ್ನುವಂತೆ ಮಕ್ಕಳಿಗೆ ರುಚಿಯಾದ ಊಟವನ್ನೇ ಕೊಟ್ಟು, ಐಶಾರಾಮಿತ್ವ ಮೇಳೈವಿಸುವಂತೆ ಮಾಡಿ, ಅಂಕಗಳೇ ಪರಮಿಚ್ಛ ಗುರಿ ಎಂದುಕೊಂಡು, ಮಕ್ಕಳೆದೆಯಲ್ಲಿ ತಾಮಸತ್ವವನ್ನು ಕಡಿಮೆಗೊಳಿಸಿ, ರಜಸತ್ವಗಳನ್ನು ಬೆಳಸದೆ ಇದ್ದರೆ ಪುಂಗಿಯ ನಾದಕ್ಕೆ ವಿಷ ಸರ್ಪ ತಲೆದೂಗುವಂತೆ ದುರ್ಗುಣಗಳಿಗೆ ಮಕ್ಕಳು ದಾಸರಾಗದೆ ಉಳಿಯುವರೇ? ಇದಕ್ಕೇನು ಮದ್ದು?

ಇದಕ್ಕೆ ಇರುವ ಸೂಕ್ತವಾದ ಮದ್ದು ಇದೆ. ಆದರೆ ಅದನ್ನು ಪಾಲಿಸುವುದಾದರೂ ಯಾರು? ಸ್ವಲ್ಪ 1970 ರಿಂದ 1980ರ ಆಸುಪಾಸಿಗೆ ನಾವು ಸಾಗೋಣ. ಅಂದು ಹೆಚ್ಚಿನ ಅಪ್ಪ, ಅಮ್ಮಂದಿರು ಅನಕ್ಷರರಾಗಿದ್ದರೂ ಸಹ ತಮ್ಮ ಮಕ್ಕಳಿಗೆ ವಾಸ್ತವಿಕ ಜಗತ್ತನ್ನು ಪರಿಚಯಿಸುತ್ತಿದ್ದರು. ನನ್ನ ಮಡಿಲಲ್ಲಿ ಹುಟ್ಟಿದ ಈ ಕಂದ ಜೀವನದಲ್ಲಿ ಯಾವುದೇ ಕಾರಣಕ್ಕೂ ಸೋಲಲೇಬಾರದು ಎಂದು ಎಲ್ಲಾ ಕ್ಷೇತ್ರಗಳಲ್ಲೂ ಜ್ಞಾನದ ದೀವಿಗೆಯನ್ನು ಅವರ ಮಕ್ಕಳಲ್ಲಿ ಬೆಳೆಸುತ್ತಿದ್ದರು. ಅಂದಿನ ಕಾಲದ ಅಪ್ಪ ಅಮ್ಮಂದಿರು ನಾವು ಕಷ್ಟ ಬಿದ್ದು ಬದುಕನ್ನು ಕಟ್ಟಿಕೊಂಡಿರುವ ರೀತಿಯಲ್ಲಿಯೇ ನಮ್ಮ ಉದರದಲ್ಲಿ ಜನಿಸಿದವರೂ ಸಹ ಕಷ್ಟ ಪಟ್ಟುಕೊಂಡೇ ತಮ್ಮ ಬದುಕನ್ನು ಕಟ್ಟಿಕೊಳ್ಳಲಿ ಎಂದು ಮನದಲ್ಲಿ ಧೃಢ ನಿಶ್ಚಯದೊಂದಿಗೆ ಈ ಜಗತ್ತನ್ನು ತಮ್ಮ ಮಕ್ಕಳಿಗೆ ಪರಿಚಯಿಸುತ್ತಲಿದ್ದರು. ಆದರೆ ಇಂದಿನ ತಂದೆ ತಾಯಿಗಳು ನಾವು ಕಷ್ಟ ಬಿದ್ದಿದ್ದೇವೆ. ನಮ್ಮ ಮಕ್ಕಳು ನಮ್ಮ ಕಷ್ಟ ಬೀಳುವುದು ಬೇಡ ಎಂಬುವ ಮನಸ್ಥಿತಿಯಿಂದ ವಾಸ್ತವತೆಯನ್ನು ಇಂದಿನ ಮಕ್ಕಳಿಗೆ ಪರಿಚಯಿಸದೆ, ಕಷ್ಟದ ಅರಿವು ಮೂಡಿಸದೆ ಮಾನಸಿಕ ದಾರಿದ್ರ್ಯಕ್ಕೆ ನಾಂದಿಯಾಯಿತೇನೋ ಎನ್ನುವ ಭಾವ ನನ್ನದಾಗಿದೆ. ಇದು ಕಹಿ ಎನಿಸಿದರೂ ಸತ್ಯ ಎನ್ನುವುದನ್ನು ಅವರೇ ಆತ್ಮಾವಲೋಕನ ಮಾಡಿಕೊಳ್ಳಲಿ.

ಅಂದು ನನ್ನ ಹಡೆದ ಅಮ್ಮ ಹಾಗೂ ಅಪ್ಪನಿಗೆ ಮಗನ ಮೇಲೆ ಪ್ರೀತಿ ಇತ್ತು. ನಾನು ಚಿಕ್ಕನಾಯಕನಹಳ್ಳಿಯ 9ನೇ ತರಗತಿಯಲ್ಲಿ ದೇಶೀಯ ವಿದ್ಯಾಪೀಠ ಶಾಲೆಯಲ್ಲಿ ಓದುವಾಗಲೇ ಅಪ್ಪನಿಗೆ ಪಾರ್ಶ್ವವಾಯು ಇದ್ದಾಗಲೂ ಸಹ ತನ್ನ ಮಗನಿಗೆ ನೇಗಿಲ ಹೂಡಿಸಿ ಹೊಲದಲ್ಲಿ ಬೇಸಾಯ ಮಾಡಿಸಿ ಒಬ್ಬ ಶುದ್ಧ ಕಾಯದ ರೈತಾಪಿತನ ಮೊಳಕೆ ಒಡೆವಂತೆ ಮಾಡಿದ್ದರು, ಶನಿವಾರ-ಭಾನುವಾರ ಬಂತೆಂದರೆ ದನಗಳನ್ನು ಪೂರ್ವ ದಿಕ್ಕಿನ ಮದ್ದನಿಂಗನ ಕಣಿವೆಗೆ ದನ ಕಾಯುವ ಹುಡುಗನ್ನಾಗಿ ಮಾಡಿದರು. ಗುರುವಾರ ಬಂತೆಂದರೆ ಹುಳಿಯಾರು ಸಂತೆಯಲ್ಲಿ ನನ್ನ ಕೈನಿಂದ ಅಡಿಕೆ ವ್ಯಾಪಾರ ಮಾಡಿಸಿದ್ದರು. ಅಮ್ಮಳಂತೂ ಪ್ರತಿದಿನ ಸ್ನಾನ ಮಾಡಿ ಶುಭ್ರವನಿತೆಯಾಗಿ ಆಕೆ ರುದ್ರೇಶ್ವರ ದೇವಸ್ಥಾನಕ್ಕೆ ತೆರಳುವಾಗ ನನ್ನನ್ನೂ ಜೊತೆಯಲ್ಲಿ ಕರೆದುಕೊಂಡು ಹೋಗಿ ಆಕೆ ಇರುವೆಗಳ ಗೂಡಿಗೆ ಅಕ್ಕಿ ನುಚ್ಚನ್ನು ಹಾಕುವಾಗ ನೋಡು ಮಗನೇ ನೀನೂ ಬದುಕು, ಇತರರನ್ನೂ ಬದುಕಿಸು ಎಂದು ಪ್ರತಿದಿನ ಪೂರ್ಣ ಪಾಠ ಮಾಡುತ್ತಿದ್ದಳು. ಇನ್ನು ಮನೆಯ ಅಕ್ಕಂದಿರುಗಳು ಸಂಜೆ ಶುಭ್ರವಾಗಿ ದೇವರ ದೀಪ ಹಚ್ಚಿ, ಮಂಗಳಾರತಿ ಮಾಡುತ್ತಾ ಭಜನೆ ಪಟಿಸುವುದನ್ನು ಕಂಡವನು ನಾನು. ಇಲ್ಲಿಯ ಇಷ್ಟು ಸಾರಾಂಶ ಎಂದರೆ ಅಪ್ಪನು ಮಗ ಸೋಲಬಾರದೆಂದು ಈ ಜಗತ್ತನ್ನು ಪರಿಚಯಿಸಿದರೆ ಅಮ್ಮ ನನಗೆ ಮಾನವೀಯತೆ, ಮನುಷ್ಯತ್ವ, ಪ್ರೀತಿ, ಭಾತೃತ್ವವನ್ನು ಕಲಿಸಿದವಳಾಗಿದ್ದಳು. ಅಕ್ಕಂದಿರು ಸಂಸ್ಕಾರ ಹೆಣೆದವರಾಗಿದ್ದರು. ನೋಡಿದರೆ ಅಪ್ಪ ಅಮ್ಮ ಇಬ್ಬರೂ ಹೆಬ್ಬೆಟ್ಟು ಗಿರಾಕಿಗಳು.

ಆದರೆ ಅವರುಗಳ ನಡೆ ಯಾವ ಮಾಡಿದವರಿಗೂ ಅಂದು ಕಡಿಮೆ ಎಂದು ನನಗನಿಸಲಿಲ್ಲ. ಕಾರಣ ಎಳೆಯವೆಯಿಂದ ನನಗೆ ನನ್ನ ಅಪ್ಪ-ಅಮ್ಮ ಕಲಿಸಿದ ಒಂದು ಧ್ಯೇಯ ಮಂತ್ರ ಎಂದರೆ ಈ ಜಗತ್ತಿನಲ್ಲಿ ಅತ್ಯಂತ ಶ್ರೇಷ್ಠವಾದ ಎರಡು ಸ್ಥಳ ಎಂದರೆ ಒಂದು ಅಮ್ಮನ ಮಡಿಲು, ಮತ್ತೊಂದು ಅಪ್ಪನ ಹೆಗಲು. ಅಮ್ಮನ ಮಡಿಲು ನನಗೆ ಈ ಜಗತ್ತಿಗೆ ನಾನು ಬರಲು ಅನುವು ಮಾಡಿಕೊಟ್ಟಿದ್ದರೆ ಪವಿತ್ರ ಅಪ್ಪನ ಹೆಗಲು ಈ ಜಗತ್ತನ್ನು ಪರಿಚಯಿಸಿರುವುದೇ ಆಗಿರುತ್ತದೆ. ಹಾಗಾಗಿ ಯಾವ ಪುಣ್ಯಕ್ಷೇತ್ರಗಳಿಗೂ, ಯಾವ ತೀರ್ಥಕ್ಷೇತ್ರಗಳಿಗಿಂತ ಶ್ರೇಷ್ಟ ಎಂದರೆ ಅದು ಅಮ್ಮನ ಮಡಿಲು ಹಾಗೂ ಅಪ್ಪನ ಹೆಗಲು. ಇದು ಒತ್ತೋಟ್ಟಿಗಿರಲಿ, ಇಂದಿನ ಮಕ್ಕಳೇಕೆ ಕ್ರಿಮಿನಲ್ ಚಟುವಟಿಕೆ ಅಥವಾ ತಮ್ಮ ಆತ್ಮಾಹುತಿ ಮಾಡಿಕೊಳ್ಳಬೇಕು ಗೊತ್ತಿಲ್ಲ. ಒಂದು ಮಗು ಹುಟ್ಟಿದಾಗಲೇ ಆ ಮಗುವಿನ ತಂದೆತಾಯಿಯವರು ಆ ಮಗುವಿನ ಕುಂಡೆಯ ಮೇಲೆ ಈ ಮಗು ಭವಿಷ್ಯದಲ್ಲಿ ಡಾಕ್ಟರೇ ಆಗಬೇಕು, ಇಂಜಿನಿಯರ್ರೇ ಆಗಬೇಕು, ನಾನು ಕಷ್ಟ ಬಿದ್ದಿರುವೆ, ಆ ಕಷ್ಟ ನನ್ನ ಮಗುವಿಗೆ ಬರಬಾರದು ಎನ್ನುವ ಭ್ರಮೆಯೇ ಈ ಅವಘಢಗಳಿಗೆ ಕಾರಣ ಎನಿಸುತ್ತದೆ. ಹೆತ್ತ ತಂದೆತಾಯಿಗಳ ಮಕ್ಕಳ ಮೇಲೆ ಇಟ್ಟಿರುವಂತಹ ಅತಿಯಾದ ಕಲ್ಪನೆ ಹಾಗೂ ಭ್ರಮೆ. ಇನ್ನು ಮಕ್ಕಳನ್ನು ಪಕ್ಕದಲ್ಲಿ ಕುಳ್ಳರಿಸಿಕೊಂಡು ಕ್ರೌರ್ಯವನ್ನು ವೈಭವೀಕರಿಸುವ ದೃಷ್ಯಗಳನ್ನು ಟಿವಿ, ಸಿನಿಮಾದಲ್ಲಿ ನೋಡುವುದು, ಯಾರೋ ಒಬ್ಬ ಸೆಲೆಬ್ರಿಟಿ ಏನೋ ಕ್ರಿಮಿನಲ್ ಆಕ್ಟಿವಿಟಿಯಲ್ಲಿದ್ದರೆ ಅದನ್ನೇ ಬ್ರೇಕಿಂಗ್ ನೀವ್ಸ್ ಮಾಡುವ ಮಾಧ್ಯಮಗಳ ಆಕರ್ಷಣೆ, ಅಂದರೆ ಕ್ರಿಮಿನಲ್ ಕಾರ್ಯ ಮಾಡಿದರೆ ನಾನೂ ಸೆಲೆಬ್ರಿಟಿಯಾಗಬಹುದೆಂಬ ಬೀಜ ಆ ಮಗುವಿನ ಮನದಲ್ಲಿ ಮೊಳಕೆಯೊಡೆಯುವ ಅಪಾಯವಿದೆ ಯೆಂಬ ಭಾವರಹಿತ ನಡವಳಿಕೆಗಳು, ಇನ್ನು ಪಕ್ಕದ ಮನೆಯ ವಿಧ್ಯಾರ್ಥಿ ಒಂದು ಅಂಕ ಹೆಚ್ಚು ತಗೆದಿದ್ದರೆ ಈ ಮಗುವಿನ ತಂದೆ ತಾಯಿಯ ಚಡಪಡಿಯನ್ನು ಹೇಳತೀರದು. ನಮ್ಮ ಮಗು ಬುದ್ದಿವಂತನಲ್ಲ ಎಂಬ ಬ್ರ್ಯಾಂಡನ್ನು ತಮ್ಮ ಹೆತ್ತ ಮಕ್ಕಳಿಗೆ ಸ್ವತಃ ತಾವೇ ನೀಡುತ್ತಾರೆ. ಇದನ್ನು ಪ್ರಶ್ನೆ ಮಾಡಿಕೊಂಡರೆ ತಮ್ಮಗಳ ಅಲ್ಪತನ ತಮಗೇ ಅರ್ಥವಾಗುತ್ತದೆ. ಇಂದಿನ ಕಾಲಘಟ್ಟದಲ್ಲಿ ನಿಗದಿಪಡಿಸಿರುವ ಅಂಕಗಳು ಕೇವಲ ಸೀಮಿತ ಜ್ಞಾನಕ್ಕೆ ಮಾತ್ರವೇ ಹೌದು. ಅದನ್ನು ಮೀರಿದ ಜ್ಞಾನದ ಹಸಿವು ಇಂದಿನ ಯುವ ಜನರಲ್ಲಿ ಕಾಣುವುದು ಸ್ವಲ್ಪ ದುಸ್ತರವೇ ಆಗಿದೆ. ಪ್ರಕೃತ ಪುಸ್ತಕದ ಜ್ಞಾನ ಮಸ್ತಕಕ್ಕೆ ಹಾಗೇ ಹೊರೆ ಇಳಿಸಿದರೆ ಸಿಗುವುದು ಲೋಕಜ್ಞಾನದ 00000000.1 % ಮಾತ್ರವೇ ಎಂಬುದು ಸತ್ಯ. ಇಂದಿನ ಮಕ್ಕಳು ಪೋಷಕರ ಒತ್ತಡಕ್ಕೆ ಪುಸ್ತಕದ ಹುಳುವಾಗಿ ಲೋಕ ಜ್ಞಾನವನ್ನು ತಿರಸ್ಕರಿಸಿ ಹೆಚ್ಚಿನವರು ಫಸ್ಟ್ ರ್ಯಾಂಕ್ ರಾಜುವೇ ಆಗಿದ್ದಾರೆ ಎಂದರೆ ಅದು ಅತಿಶಯೋಕ್ತಿ ಅಲ್ಲವೇ ಅಲ್ಲ.

### ಹೆತ್ತವರ ನಿರೀಕ್ಷೆಯೂ ಕಾರಣ

ಹೆತ್ತವರ ನಿರೀಕ್ಷೆಗಳು ವೈಪರೀತ್ಯವೆನಿಸಿ ಆ ನಿರೀಕ್ಷೆಗಳು ಯಾವುದೇ ಎಳೆಯವರಿಗೆ ನಿಲುಕದೇ ಇದ್ದಾಗ, ಲೋಕಜ್ಞಾನದ ಅರಿವು ಇಲ್ಲದೇ ಹೋದಾಗ, ಕುದುರೆಗೆ ಕಟ್ಟಿದ ಜೀನಿನಂತೆ ಮನವನ್ನು ಹದಗೊಳಿಸಿಕೊಂಡ ಎಳೆಯ ಮನಸ್ಸು ಗಳಿಗೆ ಆತ್ಮಹತ್ಯೆಯಲ್ಲದೆ ಮತ್ಯಾವ ದಾರಿಯೂ ಕಾಣುವುದಿಲ್ಲ. ಇದಕ್ಕೆಲ್ಲ ಕಾರಣ ಹಿರಿಯರು ಹೇರುವ ಒತ್ತಡ, ಹಿರಿಯರು ಇತರರಿಗೆ ಹೋಲಿಸಿ ಅಸಹ್ಯವಾಗಿ ಹೀಯಾಳಿಸುವ ಗುಣಗಳಲ್ಲದೇ ಮತ್ತೇನೂ ಅಲ್ಲವೇ ಅಲ್ಲ ಎಂಬುದು ನನ್ನ ನಿಲುವು. ಥಾಮಸ್ ಆಲ್ವಾ ಎಡಿಸನ್ ಅವರು ಎಲ್ಲರಿಂದಲೂ, ಅವನಿಗೆ ಶಿಕ್ಷಣ ಕಲಿಸಿದ ಗುರುಗಳಿಂದ ದೂರೀಕರಿಸಲ್ಪಟ್ಟಾಗ ಆತನಿಗಾದ ಮತ್ತು ತನಗಾದ ಅವಮಾನವನ್ನು ಮೆಟ್ಟಿ ನಿಂತು ಆತನನ್ನು ದೊಡ್ಡ ವ್ಯಕ್ತಿಯನ್ನಾಗಿಸಿದವಳು ಆತನ ಹೆತ್ತ ತಾಯಿ ಎಂಬುದು ನಮಗೆ ನೆನಪಿನಲ್ಲಿರಬೇಕು. ಯಾವ ಮಕ್ಕಳೂ ಸಹ ದಡ್ಡರೂ ಅಲ್ಲ ಹಾಗೆಯೇ ಅತೀವ ಬುದ್ದಿವಂತರೂ ಅಲ್ಲ. ತಾಯಿಯ ಗರ್ಭದಿಂದ ಆಚೆಗೆ ಬಂದು ಈ ಜಗಕ್ಕೆ ಅತಿಥಿಯಾದ ಎಲ್ಲಾ ಮಕ್ಕಳೂ ಸಹ ಖಾಲಿ ಕಂಪ್ಯೂಟರ್‌ಗಳೇ ಆಗಿರುತ್ತಾರೆ. ದೈನಂದಿನ ಬದುಕು, ಪರಿಸರ, ತಂದೆ ತಾಯಿಯವರ ಮನಸ್ಥಿತಿಯ ಆಧಾರದಲ್ಲಿ ಉತ್ತಮರೋ ಅಥವಾ ಅಧಮರೋ ಆಗಿರುತ್ತಾರೆ. ಯಾವುದೇ ಮಗುವಿನ ಏಳಿಗೆಯಾಗಲಿ, ಬೀಳೇ ಆಗಲಿ ಎಲ್ಲಕ್ಕೂ ಕಾರಣಕರ್ತರು ಅವರ ಹೆತ್ತವರೇ ಆಗಿರುತ್ತಾರೆ ಎನ್ನುವುದು ಸತ್ಯ. ಈ ಜಗವನ್ನೇ ಅರಿಯದ, ಅರ್ಥ ಮಾಡಿಕೊಳ್ಳದ ಎಳೆಯರು ಅಥವಾ ಆತ್ಮಹತ್ಯೆಯನ್ನು ಮಾಡಿಕೊಂಡರೆ ಅದಕ್ಕೆ ನೇರ ಹೊಣೆ ಅವರ ಪೋಷಕರೇ ಆಗಿರುತ್ತಾರೆ ಎಂಬುದು ನಿಸ್ಸಂಶಯ. ಮಕ್ಕಳನ್ನು ಹುಟ್ಟಿಸುವುದು ಯೋಗ್ಯತೆಯಲ್ಲ, ಹುಟ್ಟಿಸಿದ ಮಕ್ಕಳನ್ನು ಆಚಾರ, ವಿಚಾರ, ಸಂಸ್ಕೃತಿ, ಪರಂಪರೆಗಳನ್ನು ಬೋಧನೆ ಮಾಡುತ್ತಾ ಆ ಮಕ್ಕಳನ್ನು ಈ ಸಮಾಜದ ಆಸ್ತಿಯನ್ನಾಗಿ ಮಾಡುವುದೇ ನಿಜವಾದ ಯೋಗ್ಯತೆ ಎಂಬುದು ನನ್ನ ಮನಸ್ಥಿತಿ. ಅಮ್ಮನ ಬಿಸಿಯುಸಿರು ಹಾಗೂ ಅಪ್ಪನ ಬೆವರಿನ ವಾಸನೆ ಮಕ್ಕಳಿಗೆ ಪ್ರತಿದಿವೂ ತಾಗಬೇಕು ಎಂಬುದು ನನ್ನ ಮನದ ನಿಲುವು. ಮನೆಯ ಹಿರಿಯರು ಮಕ್ಕಳಿಗೆ ಎಳೆಯದರಿಂದಲೇ ಬೆವರಿನ ಕಮಟು ವಾಸನೆಗೆ ಆಕರ್ಷಿತವಾಗುವಂತೆಯೂ, ಪರರು ನೀಡುವ ಸುಗಂಧ ದ್ರವ್ಯವನ್ನು ದೂರಿಕರಿಸುವಂತೆಯೂ ಮನದಲ್ಲಿ ಮೂಡಿಸುವುದು ಅತ್ಯಾವಶ್ಯವಾಗಿರುತ್ತದೆ.

### ಉತ್ತರ ಊಹೆಗೂ ನಿಲುಕದ ನಕ್ಷತ್ರ

ಹುಬ್ಬಳ್ಳಿಯಲ್ಲಿ ಜಗತ್ತನ್ನೇ ಅರಿಯದ ಕಂದಮ್ಮನಿಂದ ಮತ್ತೊಂದು ಕಂದನ ಹತ್ಯೆಯ ಜೊತೆಗೆ ಇಲ್ಲಿಯ ತನಕ ಜಗತ್ತನ್ನೇ ಅರಿಯದ ನಾಲ್ಕು ಎಳೆಯ ಮನಸ್ಸುಗಳು ತಮ್ಮನ್ನು ತಾವು ಅಂತ್ಯಗೊಳೀಸಿಕೊಂಡಿದ್ದಾರೆ. ಇನ್ನು ಇಡೀ ರಾಜ್ಯದಲ್ಲಿ ಎಷ್ಟಿರಬಹುದು. ಇದಕ್ಕೆ ಕಾರಣ ಪೋಷಕರ ಭ್ರಮೆಯೇ? ಒತ್ತಡವೇ? ಅತಿಯಾದ ನಿರೀಕ್ಷಣೆಯೇ ಅಥವಾ ಇತರ ಮಕ್ಕಳೊಂದಿಗೆ ಪೈಪೋಟಿಯೇ? ಈ ಪ್ರಶ್ನೆಗಳನ್ನು ಅವರವರ ಮನೋಭಾವಕ್ಕೆ ಬಿಟ್ಟರೂ ಈ ಪ್ರಶ್ನೆಗಳಿಗೆ ಉತ್ತರ 100% ನಮ್ಮ ಊಹೆಗೆ ನಿಲುಕದ ನಕ್ಷತ್ರದ ಹಾಗೇ ಇದೆ. ಯಾರೋ ಮಕ್ಕಳು ಮನೆ ಬಿಟ್ಟು ನಡೆದಿರುತ್ತಾರೆ. ಇದಕ್ಕೆಲ್ಲಾ ಉತ್ತರ ಗೊತ್ತಿಲ್ಲ. ಇದನ್ನು ಇಂದು ಹೇಳುವವರಾದರೂ ಯಾರು

ಮೊದಲಿಗೆ

1. ಮಕ್ಕಳಿಗೆ ಅಪ್ಪನ ಹಾಗೂ ಅಮ್ಮನ ಬಿಸಿಯುಸಿರು ಅನುಕ್ಷಣವೂ, ಅನುದಿನವೂ ತಾಗುವಂತೆ ಬೆಳಸಬೇಕು. ಅಪ್ಪನ ದುಡಿಮೆಯ ಕಷ್ಟವನ್ನೂ, ತಾಯಿಯ ತ್ಯಾಗವನ್ನೂ ಮಕ್ಕಳಿಗೆ ಅಪ್ಪ ಅಮ್ಮಂದಿರೇ ಪರಿಚಯಿಸಬೇಕು.

2. ತಂದೆ-ತಾಯಿಗಳು ತಮ್ಮ ಮಕ್ಕಳಿಗೆ ಅರ್ಹ ಮತ್ತು ಯೋಗ್ಯ ಈ ನೆಲದ ಪುಣ್ಯ ಪುರುಷರ ಇತಿಹಾಸ ತಿಳಿಸುವಂತಹ ಕಾರ್ಯ ಮಾಡಬೇಕು.

3. ಬರೀ ಓದು, ಬರೀ ಅಂಕವೇ ಜೀವನವಲ್ಲ, ಪ್ರತಿಯೊಂದು ಮಗುವೂ ಸಹ ಈ ನೆಲ, ಜಲ, ಪರಿಸರದೊಂದಿಗೆ ಒಡನಾಡಿಯಾಗಿ ಬೆಳೆಯಬೇಕು.

4. ಎಲ್ಲಾ ಮಕ್ಕಳೂ ಗೆಲ್ಲಬೇಕೆಂಬುದು ಹಿರಿಯರ ಒತ್ತಾಸೆಯಾಗಿರಲಿ, ಆದರೆ ಮಕ್ಕಳು ಯಾವ ಕಾರಣಕ್ಕೂ ಜೀವನದಲ್ಲಿ ಸೋಲಬಾರದು ಎಂದು ಹಲವಾರು ವಿದ್ಯೆಗಳನ್ನು ಪರಿಚಯಿಸಬೇಕು.

5. ಮಕ್ಕಳ ಮೇಲೆ ಓದು, ಓದು ಎಂದು ಒತ್ತಡ ಹಾಕುವುದನ್ನು ಬಿಡಬೇಕು.

6. ಮಕ್ಕಳನ್ನು ಇತರೆ ಮಕ್ಕಳಿಗೆ ಹೋಲಿಸಿ ಮಾತನಾಡಬಾರದು. ಕಾರಣ ಯಾವ ಮಗುವೂ ಸಹ ಹೋಲಿಕೆ ಮಾಡಿ ಹೀಯಾಳಿಸುವುದನ್ನು ತಡೆಯುವುದಿಲ್ಲ.

7. ಮಕ್ಕಳ ಮುಂದೆ ಅವಾಚ್ಯ ಶಬ್ದಗಳನ್ನು ಉಪಯೋಗಿಸಬಾರದು. ಅವರಲ್ಲಿಯ ತಾಮಸತ್ವವನ್ನು ಕಡಿಮೆ ಮಾಡುವಂತಹ ರಜಸ್ಸತ್ವವನ್ನು ಬೇಳೆಸುವುದು ಸೂಕ್ತ. ಅಂದರೆ ಕೋಪ, ಕಿಡಿ, ಸೇಡು, ಈರ್ಷ್ಯೆ, ದರ್ಪ, ಅಹಂ ಗಳಂಥಹ ತಾಮಸಿತನವನ್ನು ದಯೆ, ಕರುಣೆ, ಪ್ರೀತಿ, ಸಂಬಂಧ, ಕ್ಷಮೆಗಳಂಥಹ ರಜಸ್ಸು ಗುಣಗಳನ್ನು ಬೆಳೆಸುವುದು.

8. ಮಕ್ಕಳ ಮುಂದೆ ಸಂಸ್ಕಾರಯುತ ಮಾತಿರಬೇಕು. ಇನ್ನೊಬ್ಬರನ್ನು ಹೀಯಾಳಿಸುವುದು, ದರ್ಪದಿಂದ ಮಾತನಾಡುವುದನ್ನು ಬಿಟ್ಟು ಬಿಡಬೇಕು. ಮಕ್ಕಳ ಮುಂದೆ ಅಪ್ರಮಾಣಿಕತೆ, ಲಂಚ, ರುಷುವಾತ್ತುಗಳ ಬಗ್ಗೆ ಮಾತನಾಡಲೇಬಾರದು.

9. ಹೆತ್ತವರು ಊಟಕ್ಕೆ ಕುಳಿತಾಗ ಅವರ ಮೊದಲ ತುತ್ತು ಆ ಮಕ್ಕಳಿಗೆ ಮೀಸಲಿರಬೇಕು.

10. ಪ್ರತಿದಿನವೂ ಕನಿಷ್ಟ ಎರಡು ಗಂಟೆ ಮಕ್ಕಳೊಂದಿಗೆ ಹರಟೆ ಹೊಡೆಯುತ್ತಾ ಅವರಿಗೆ ಲೋಕಜ್ಞಾನವನ್ನು ತಿಳಿಯಪಡಿಸಬೇಕು.

11. ಮಕ್ಕಳಿಗೆ ಒಂದಿಲ್ಲದಿದ್ದರೂ ಮತ್ತೊಂದು ಅವಕಾಶವಿದೆ ಎಂದು ಸದೃಢರನ್ನಾಗಿ ಮಾಡಬೇಕು.

12. ವಿದ್ಯೆಯೆಂಬುದು ಜ್ಞಾನ, ಮಕ್ಕಳಿಗೆ ಯಾವುದರಲ್ಲಿ ಆಸಕ್ತಿ ಇದೆಯೋ ಅದನ್ನು ಪೋಷಕರು ಪತ್ತೆ ಹಚ್ಚಿ ಅವರಲ್ಲಿ ನಾನು ನಾಳೆ ದೊಡ್ಡ ವ್ಯಕ್ತಿತ್ವದ ಮನುಜನಾಗುವೆ ಎಂಬ ಸ್ವ ಸ್ವಾಭಿಮಾನ ಬೆಳೆಸಬೇಕು.

13. ಕೇವಲ ಅಂಕಗಳಿಂದ ನಮ್ಮ ಮಕ್ಕಳ ಯೋಗ್ಯತೆಯನ್ನು ಅಳೆಯಬಾರದು. ಮಕ್ಕಳು ಕಡಿಮೆ ಅಂಕ ತಗೆದರೂ ನಾವು ಹೆಮ್ಮೆಯಿಂದಿರಬೇಕು.

14. ಮಕ್ಕಳನ್ನು ಪ್ರೀತಿಸಬೇಕು, ಪ್ರೀತಿಸುತ್ತಲೇ ಇರಬೇಕು. ಅವರಿಗೆ ಅಪ್ಪ ಅಮ್ಮನ ಪ್ರೀತಿ ಹೊರತು ಪಡಿಸಿ ಮತ್ಯಾವ ಪ್ರೀತಿಯೂ ನಗಣ್ಯವಾಗುವಂತೆ ಬೆಳಸಬೇಕು. ಜೊತೆಗೆ ಕರುಣೆ ತೋರದವನಿಗೆ ಕರುಣೆ ದೊರೆಯದು. ಆದ್ದರಿಂದ, ಪಾಲಕರು ಮಕ್ಕಳೊಂದಿಗೆ ಸಮಯ ಕಳೆಯಬೇಕು, ಅವರ ಭಾವನೆಗಳನ್ನು ಅರ್ಥಮಾಡಿಕೊಂಡು, ಪ್ರೀತಿಯಿಂದ ವರ್ತಿಸಬೇಕು. ಇದು ಮಕ್ಕಳ ಮನಸ್ಸಿನಲ್ಲಿ ಕ್ರೌರ್ಯದ ಬದಲು ಸಹಾನುಭೂತಿಯನ್ನು ಬೆಳೆಸುತ್ತದೆ.

15. ಮಕ್ಕಳಿಗೆ ಮಹಾಮಹಿಮರ ಕಥೆ ಹೇಳುತ್ತಿರಬೇಕು. ಉದಾ: ತಂದೆ ತಾಯಿಯರ ಪ್ರೀತಿಯ ಬಗ್ಗೆ ಶ್ರವಣಕುಮಾರ, ನಿರ್ಲ್ಯಕ್ಷಿಸಿದಕ್ಕೆ ದೇವರನ್ನೇ ಪ್ರತ್ಯಕ್ಷಗೊಂಡ ಧೃವ, ಅಣ್ಣ ತಮ್ಮಂದಿರ ಬಗ್ಗೆ ರಾಮ ಲಕ್ಷ್ಮಣರ ಕಥೆ, ಸಾಧನೆ ಮಾಡಿದಂತಹ ಅಬ್ದುಲ್ ಕಲಾಂ ಸಾರ್ ಅವರ ಬಗ್ಗೆ, ಗಾಂಧಿ, ಸುಭಾಷ್ ಚಂದ್ರ ಬೋಸ್, ಟಿಳಕರು, ವಿವೇಕಾನಂದರು, ಪರಮಹಂಸರು, ಶಾರದಾದೇವಿ ಬಗ್ಗೆ ಹೀಗೆ ಅನೇಕ ಮಹಾಮಾನ್ಯರ ಬಗ್ಗೆ ಹೇಳುತ್ತಲೇ ಇರಬೇಕು.

16. ಇಂದು ಹಳ್ಳಿಗಳು ವೃದ್ದಾಶ್ರಮವಾಗಿವೆ. ಮೊಮಕ್ಕಳನ್ನು ಕಾಣದ ಅಜ್ಜ-ಅಜ್ಜಿಯರು ನೋವಿನಲ್ಲಿರುತ್ತಾರೆ. ಅವರಿಗೆ ಮೊಮ್ಮಕ್ಕಳನ್ನು ಕಾಣುವ ತವಕ ಇರುತ್ತೆ, ಹಾಗಾಗಿ ಸಮಯ ಸಿಕ್ಕಾಗ ತಮ್ಮ ಸ್ವಂತ ಊರು, ಕೇರಿಯೊಂದಿಗೆ ಸಂಬಂಧ ಬೆಸೆಯುವಂತಹ ಮತ್ತು ಅಜ್ಜ ಅಜ್ಜಿಯರೊಂದಿಗೆ ಮೊಮ್ಮಕ್ಕಳು ಖುಷಿಯಾಗಿರುವಂತಹ ವಾತಾವರಣವನ್ನು ಬೆಳೆಸಬೇಕು.

17. ನಮ್ಮ ಉದರದಲ್ಲಿ ಜನಿಸಿದ ಮಕ್ಕಳ ಬಗ್ಗೆ ಗೌರವ, ಪ್ರೀತಿ, ಹೆಮ್ಮೆ ತುಂಬಿರಬೇಕು.

18. ಮಕ್ಕಳಿಗೆ ಪುಸ್ತಕವು ಮಸ್ತಕಕ್ಕೆ ಹತ್ತಿದ್ದರೂ ಸಹ ಅವರಿಗೆ ಸಾಮಾನ್ಯಜ್ಞಾನ, ಲೋಕ ಜ್ಞಾನಕ್ಕೆ ಒತ್ತು ಕೊಟ್ಟು ಬೆಳೆಸಬೇಕು.

19. ಮಕ್ಕಳ ಮುಂದೆ ಭ್ರಷ್ಟಾಚಾರ, ಅಪ್ರಮಾಣಿಕತನದ ಬಗ್ಗೆ ಮಾತನಾಡಲೇಬಾರದು.

20 ಮಕ್ಕಳೊಂದಿಗೆ ಆಯಾ ದಿನದ ಲೋಕ ವಿಷಯಗಳ ಬಗ್ಗೆ ಅಪ್ಪ ಅಮ್ಮ ಡಿಸ್ಕಷನ್ ಮಾಡಬೇಕು. ಇದರಲ್ಲಿಯ ಸಾಧಕ ಭಾದಕಗಳ ಚರ್ಚೆ ದಿನವಹಿ ಹರಟೆ ಸಮಯದಲ್ಲಿ ನಡೆಯಲೇಬೇಕು.

21. ಮಕ್ಕಳ ಮುಂದೆ ಅತಿಯಾದ ಹಣ, ಆಭರಣ, ಆಸ್ತಿ, ಅಂತಸ್ತು, ಅಧಿಕಾರದ ದರ್ಪದ ಮಾತುಗಳನ್ನು ಆಡಲೇಬಾರದು.

22. ಇಂದಿನ ಆಧುನಿಕ ಸಮಾಜದಲ್ಲಿಯ ಸೋಸಿಯಲ್ ಮೀಡಿಯಾ, ದೃಷ್ಯ ಮಾಧ್ಯಮಗಳಲ್ಲಿ ಮಕ್ಕಳಿಗೆ ಜ್ಞಾನ ಬರುವಂತಹುಗಳನ್ನು ಹಿರಿಯರು ತೋರಿಸಬೇಕು.

23. ಇಂದಿ ಗ್ಯಾಜೆಟ್ , ಇಂಟರ್ ನೆಟ್ ಯುಗದಲ್ಲಿ ಮಕ್ಕಳು ಯಾವ ಸೈಟ್ ನೋಡುತ್ತಿದ್ದಾರೆ, ಏನು ಮಾಡುತ್ತಿದ್ದಾರೆ ಎಂಬುದನ್ನು ಸೂಕ್ಷ್ಮವಾಗಿ ಹೆತ್ತವರು ಗಮನಿಸಬೇಕು.

24. ಮಕ್ಕಳಲ್ಲಿ ಅವರ ನಡವಳಿಕೆಯಲ್ಲಿ ಏನಾದರೂ ವ್ಯತ್ಯಾಸಗಳು ಕಂಡು ಬರುತ್ತಿದ್ದರೆ ಅದನ್ನು ಹಿರಿಯರು ಗಮನಿಸುತ್ತಿರಬೇಕು. ವ್ಯತ್ಯಾಸಗಳೇನಾದರೂ ಕಂಡು ಬಂದರೆ ಅದನ್ನು ಹಿರಿಯರೇ ಬಗೆಹರಿಸಲು ಪ್ರಯತ್ನಿಸಬೇಕು, ಇಲ್ಲವಾದರೆ ಕೌನ್ಸಿ ಲಿಂಗ್ ಸೆಂಟರ್ ಗೋ, ಮಾನಸಿಕ ತಜ್ಞರಿಗೋ ತೋರಿಸಿ ಪರಿಹಾರ ಕಂಡುಕೊಳ್ಳಬೇಕು.

25. ಕೊನೆಗೆ ಹಿರಿಯರು ಮಕ್ಕಳನ್ನು ಹುಟ್ಟಿಸುವುದು ಯೋಗ್ಯತೆಯಲ್ಲ, ಅವರನ್ನು ಈ ಸಮಾಜಕ್ಕೆ ಆಸ್ತಿಯನ್ನಾಗಿ ಮಾಡುವುದು ಯೋಗ್ಯತೆ ಎಂಬುದನ್ನು ಅರಿತು ಮಕ್ಕಳನ್ನು ಸಂಸ್ಕಾರಿಯಾಗುವಂತೆ ಬೆಳೆಸುವುದು.

ಹೀಗೆ ಹತ್ತು ಹಲವು ಆಯಾಮಗಳ್ಲಿ ಮಕ್ಕಳನ್ನು ಪೋಷಿಸುತ್ತಾ ಬೆಳೆಸಬೇಕು. ಬೇವು ಬಿತ್ತಿ ಮಾವು ಬೆಳೆವ ತವಕ ಹಿರಿಯರಲ್ಲಿರದೆ ಮಕ್ಕಳಲ್ಲಿ ಆತ್ಮ ವಿಶ್ವಾಸ ತುಂಬಿ, ಒಂದಿಲ್ಲದಿದ್ದರೆ ಮತ್ತೊಂದೆನ್ನುವ ಭಾವವನ್ನು ಎಳೆಯದಿರಿಂದಲೇ ಬೆಳೆಸಬೇಕು. ಹೀಗೆ ಹೆತ್ತ ಪೋಷಕರು ಕಾಳಜಿವಹಿಸಿ ಬೆಳೆಸಿದರೆ ಮಾತ್ರವೇ ನಮ್ಮ ಉದರದಲ್ಲಿ ಬೆಳೆದವರು ನಾಳೆ ಈ ಸಮಾಜಕ್ಕೆ ಆಸ್ತಿಯಾಗುವರು, ಇಲ್ಲದೆ ಹೋದರೆ ಅವರು ಒಂದು ಕೆಟ್ಟ ಮನಸ್ಥಿಯವನಾಗಿ ಕಳಂಕ ತರುವನಾಗಿಯೋ ಅಥವಾ ಆತ್ಮಹತ್ಯೆಗೆ ಶರಣಾಗುತ್ತಾರೆ ಇಲ್ಲ ಸಮಾಜಕ್ಕೆ ಕಂಟಕವಾಗುತ್ತಾರೆ

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248